
ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2014
ಬೆಲೆ ರೂ. 1




## ಕರ್ನಾಟಕ ರಾಜ್ಯೋತ್ಸವ ಸಂಘದಲ್ಲಿ ಸಂಭ್ರಮ

ದೆಹಲಿ ಕರ್ನಾಟಕ ಸಂಘದ
# ಅಭಿಮತ

ಸಂಪುಟ 25 ಸಂಚಿಕೆ 2
ನವೆಂಬರ್ 2014, ಬೆಲೆ ರೂ. 1

## ನೇರ ಮಾತು

ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವ ಈ ತಿಂಗಳು ನಾವು ಕನ್ನಡ ಮತ್ತು ಕರ್ನಾಟಕ ರಾಜ್ಯ ಸ್ವರೂಪದ ಕುರಿತು ಚಿಂತನೆ ಮಾಡಬೇಕಾಗಿದೆ. ಕೆಲವು ವರ್ಷಗಳಿಂದ ಕನ್ನಡ ಭಾಷೆಯ ಉಳಿವಿನ ಕುರಿತು ಆತಂಕ ಉಂಟಾಗಿತ್ತು. ಆದರೆ ಕನ್ನಡವು ಸಾಯುವ ಭಾಷೆ ಎಂಬ ಆತಂಕ ನಮಗೆ ಬೇಕಾಗಿಲ್ಲ. ಕಾರಣ, ಭಾಷೆಯ ಬೆಳವಣಿಗೆಗೆ ಪೂರಕವಾಗಿರುವ ಸಾಹಿತ್ಯದ ಸೃಷ್ಟಿ ಮತ್ತು ಭಾಷೆಯ ಬಳಕೆ ಅಂತರ್ಜಾಲ ಸೇರಿದಂತೆ ದಿನನಿತ್ಯದ ಬದುಕಿನಲ್ಲಿ ಯಥೋಚಿತವಾಗಿ ನಡೆಯುತ್ತಿದೆ.

ಆದರೆ ನಾವು ಏಕೀಕೃತ ಕರ್ನಾಟಕದ ಉಳಿವಿನ ಕುರಿತು ಗಂಭೀರವಾಗಿ ಚಿಂತಿಸುವ ಅಗತ್ಯವಿದೆ ಎಂದು ಕಳೆದ ಕೆಲವು ವರ್ಷಗಳ ಬೆಳವಣಿಗೆಗಳಿಂದ ಅನಿಸುತ್ತದೆ. ಏಕೀಕೃತ ಕರ್ನಾಟಕವನ್ನು ಒಡೆಯುವ ಧ್ವನಿಗಳು ಆಗಾಗ ಕೇಳಿ ಬರುತ್ತಿರುವುದು ವಿಷಾದನೀಯ. ದಕ್ಷಿಣದ ರಾಜ್ಯ ಆಂಧ್ರಪ್ರದೇಶವು ತೆಲಂಗಾಣವೆಂಬ ಹೊಸ ರಾಜ್ಯದ ಉದಯದೊಂದಿಗೆ ಇಬ್ಭಾಗವಾದುದು ಕರ್ನಾಟಕದಲ್ಲಿಯೂ ರಾಜ್ಯವನ್ನು ಒಡೆಯಲು ಸ್ಫೂರ್ತಿಯಾಯಿತೇ ಎಂಬ ಆತಂಕವಿದೆ.

ಜತೆಗೆ ಒಂದು ಪ್ರದೇಶದ ಜನತೆಗೆ ಅವರ ನಿತ್ಯಜೀವನದ ಅವಶ್ಯಕತೆಗಳನ್ನು ಬೆಂಗಳೂರಿನಲ್ಲಿರುವ ಸರಕಾರವು ಈಡೇರಿಸದಿದ್ದಾಗ ಆಗುವ ಆಕ್ರೋಶವು ಅವರದೇ ಆದ ರಾಜ್ಯವನ್ನು ಕೇಳುವ ಪ್ರಚೋದನೆ ನೀಡುತ್ತಿದೆಯೇ ಎಂದೂ ಚಿಂತಿತರಾಗಬೇಕು. ಹಿಂದೆ ಇದ್ದ ಕೇಂದ್ರ ಸರಕಾರವು ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಿಗೆ ವಿಶೇಷ ಸವಲತ್ತುಗಳನ್ನು ನೀಡುವ ಅವಕಾಶವನ್ನು ಸಂವಿಧಾನ ತಿದ್ದುಪಡಿಯ ಮೂಲಕ ಮಾಡಿದೆ.

ಇನ್ನು ಭಾಷೆಯಂತಹ ಭಾವನಾತ್ಮಕ ವಿಷಯವನ್ನು ಕೈಗೆತ್ತಿಕೊಂಡು ಕೆಲವು ಶಕ್ತಿಗಳು ಬೆಳಗಾವಿಯ ಗಡಿ ಪ್ರದೇಶದಲ್ಲಿ ತಮ್ಮ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಸೇರಿಸಿರಿ ಎಂದು ಪ್ರತ್ಯೇಕತೆಯ ಮಾತಾಡುತ್ತಿವೆ. ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದೂ ತಮ್ಮದೇ ಆದ ಭಾಷೆ ಮತ್ತು ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಕೊಡವರು ಮತ್ತು ತುಳುವರು ತಮಗೆ ತಮ್ಮದೇ ರಾಜ್ಯ ಬೇಕು ಎಂದು ಸುಪ್ತವಾಗಿ ಮಾಡುತ್ತಿರುವ ಹೋರಾಟಗಳು ಮತ್ತೆ ಚಿಗುರೊಡೆಯುತ್ತಿವೆ.

ಪ್ರತಿ ವರ್ಷ ನವಂಬರ್ ಒಂದರಂದು ಕೊಡಗು ರಾಜ್ಯದ ಬೇಡಿಕೆಗೆ ದೆಹಲಿಯ ಜಂತರ್‌ಮಂತರ್‌ನಲ್ಲಿ ಕೊಡವರ ಒಂದು ಗುಂಪು ಆಂದೋಲನ ನಡೆಸುತ್ತಿದೆ. ತಮ್ಮ ಭಾಷೆಗೆ ಕರ್ನಾಟಕದಲ್ಲಿಯೂ ಅಧಿಕೃತ ಮನ್ನಣೆಯಿಲ್ಲ, ದೇಶದ ಸಂವಿಧಾನದಲ್ಲಿಯೂ ಅಧಿಕೃತ ಭಾಷಾ ದರ್ಜೆ ಸಿಗಲಿಲ್ಲ ಎಂಬ ನೋವು ತುಳುವರಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಒಂದು ಗಂಭೀರ ಹೋರಾಟದ ನೆಲೆಯತ್ತ ಹೋಗಬಹುದೇ ಎಂಬ ಆತಂಕವೂ ಆಗುತ್ತಿದೆ.

ನಾವು ಇಂದು ಆಚರಿಸುವ ಕರ್ನಾಟಕ ರಾಜ್ಯೋತ್ಸವಕ್ಕೆ ಕಾರಣವಾಗಿರುವ ಕರ್ನಾಟಕದ ಏಕೀಕರಣದ ಪ್ರಕ್ರಿಯೆಗೆ ಬಹಳಷ್ಟು ಮಂದಿ ಹೋರಾಡಿದ್ದಾರೆ. ಏಕೀಕೃತ ಕರ್ನಾಟಕ ಒಂದು ಭಾಷಾವಾರು ರಾಜ್ಯವಾದರೂ ಹಿಂದಿನಿಂದಲೂ ಕರ್ನಾಟಕವೆಂಬ ಭೌಗೋಳಿಕ ಪ್ರದೇಶದಲ್ಲಿ ಕನ್ನಡ ಮಾತ್ರವಲ್ಲದೇ ಇತರ ಭಾಷೆಯನ್ನು ಮಾತಾಡುವ ಮಂದಿಯೂ ಬಹಳಷ್ಟು ಸಂಖ್ಯೆಯಲ್ಲಿ ಇದ್ದು ಅವರದೇ ಆದ ಸಾಂಸ್ಕೃತಿಕ ನೆಲೆಗಟ್ಟನ್ನೂ ಹೊಂದಿದ್ದಾರೆ. ತೆಲಂಗಾಣದ ಗಡಿಯಲ್ಲಿರುವ ತೆಲುಗು, ಉತ್ತರ ಕರ್ನಾಟಕದಲ್ಲಿರುವ ಮರಾಠಿ ಮತ್ತು ಉರ್ದು, ಕರಾವಳಿ ಪ್ರದೇಶದ ಕೊಂಕಣಿ, ತುಳು, ಹವ್ಯಕ, ಬ್ಯಾರಿ ಭಾಷೆ ಮತ್ತು ಅರೆಭಾಷೆ, ಕೊಡಗಿನಲ್ಲಿರುವ ಕೊಡವ ತಕ್ಕ್, ಈಗ ಬೆಂಗಳೂರಿನಂತಹ ಮಹಾನಗರದಲ್ಲಿರುವ ಹಿಂದಿ, ಗುಜರಾತಿ, ಪಂಜಾಬಿ ಅಲ್ಲದೇ ತಮಿಳು ಭಾಷೆಯನ್ನು ಆಡುವ ಜನರೆಲ್ಲರೂ ಕರ್ನಾಟಕದಲ್ಲಿದ್ದು ಕನ್ನಡ ಸಂಸ್ಕೃತಿಯನ್ನು ತಮ್ಮದಾಗಿಸಿದ್ದಾರೆ.

ಆದರೆ ಕನ್ನಡಿಗರು ರಾಜ್ಯದ ಇತರ ಮಾತೃ ಭಾಷಿಗರನ್ನು ಕನ್ನಡಿಗರೆಂದು ಪರಿಗಣಿಸದೇ ಹೋದರೆ ಅಖಂಡವಾಗಿರುವ ಕರ್ನಾಟಕ ರಾಜ್ಯವು ಒಡೆಯಲು ಅವಕಾಶವಾಗಬಹುದು. ವಿವಿಧ ಭಾಷೆಗಳನ್ನು ಆಡುವ ಪ್ರಜೆಗಳಿರುವ ಕರ್ನಾಟಕ ರಾಜ್ಯದ ಉದಯವು 1956ರಲ್ಲಿ ಆಯಿತು. ಆ ಎಲ್ಲಾ ಭಾಷಿಕರನ್ನು ಒಳಗೊಂಡ ಕರ್ನಾಟಕವು ಪ್ರತಿವರ್ಷ 'ಕರ್ನಾಟಕ ರಾಜ್ಯೋತ್ಸವ'ವನ್ನು ಸಂಭ್ರಮದಿಂದ ಆಚರಿಸುತ್ತಾ ಸಮಗ್ರ ಕರ್ನಾಟಕವು ಚಿರಾಯು ಆಗಲಿ ಎಂದು ಆಶಿಸೋಣ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಸ್ಥಳೀಯ ಕಲಾವಿದರ ತಿಂಗಳ ನಾಟಕದಲ್ಲಿ ದೆಹಲಿ ಫ್ರೆಂಡ್ಸ್ ಪ್ರಸ್ತುತಪಡಿಸಿದ 'ಮುದ್ದಣ್ಣ ಪ್ರಮೋಶನ್ ಪ್ರಸಂಗ' ಮತ್ತು ದೆಹಲಿ ಮಿತ್ರ ಪ್ರಸ್ತುತಪಡಿಸಿದ 'ಗೋವಿಂದಾನಿ ಗೋವಿಂದಾ ಗೋವಿಂದ !' ನಾಟಕಗಳು ಚೆನ್ನಾಗಿ ಮೂಡಿಬಂದಿವೆ. ರಾಜ್ಯೋತ್ಸವದ ವಿಶೇಷ ಕಾರ್ಯಕ್ರಮಗಳಿಂದಾಗಿ ನವೆಂಬರ್ ತಿಂಗಳಲ್ಲಿ ಪ್ರಸ್ತುತಪಡಿಸಲಾಗಲಿಲ್ಲ. ಡಿಸೆಂಬರ್‌ನಿಂದ ತಿಂಗಳ ನಾಟಕ ಮುಂದುವರಿಯುವುದು. ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರಕಲಾ ಪ್ರದರ್ಶನಗಳು ನಿರಂತರವಾಗಿ ನಡೆಸುವಂತೆ ನಾವು ಪ್ರಯತ್ನಿಸಿದ್ದೇವೆ.

ನವೆಂಬರ್ 1 ರಿಂದ ರಾಜ್ಯೋತ್ಸವ ಕಾರ್ಯಕ್ರಮಗಳು ಆರಂಭವಾಗಿದ್ದು ಪ್ರತಿ ಶನಿವಾರ ಚಲನಚಿತ್ರ ಪ್ರದರ್ಶನ, ನವೆಂಬರ್ 9ರಂದು ದಿ.ಎಚ್.ವೈ. ಶಾರದಾ ಪ್ರಸಾದ್ ಅವರು ಅನುವಾದಿಸಿದ ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮಾ ಅವರ ಕನ್ನಡಕೃತಿ 'ವಾರ್ಧಾಯಾತ್ರೆಯ ಆಂಗ್ಲ ಅನುವಾದ 'ಎ ಜರ್ನಿ ಟು ವಾರ್ಧಾ' ಕೃತಿಯ ಬಿಡುಗಡೆ ಹಾಗೂ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಅವರಿಂದ ಯಕ್ಷಗಾನ. ನವೆಂಬರ್ 16ರಂದು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕೋಟಿಗಾನ ಹಳ್ಳಿ ರಾಮಯ್ಯ ಅವರಿಗೆ ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ ಹಾಗೂ ಬೆಂಗಳೂರಿನ 'ರೇಮೋ'ಸ್ ಮ್ಯೂಸಿಕ್ ಸ್ಪಾರ್ಕ್ ಸಂಗೀತ ಕಾರ್ಯಕ್ರಮ. ನವೆಂಬರ್ 30ರಂದು ಸ್ಥಳೀಯ ಕಲಾವಿದರಿಂದ ಜಾನಪದ ಸಮೂಹ ನೃತ್ಯ ಕಾರ್ಯಕ್ರಮಗಳು ಹಾಗೂ ಶ್ರೀ ಟಿ.ಎಂ. ಶಿರೂರು ಮತ್ತು ಶ್ರೀ ಕೆ.ಆರ್. ಸುಬ್ಬಣ್ಣ ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ, ವಾರ್ಷಿಕ ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆಯನ್ನು ಹಮ್ಮಿಕೊಳ್ಳಲಾಗಿದೆ.

ಜೆ.ಎನ್.ಯು.ನಲ್ಲಿ ಕನ್ನಡ ಅಧ್ಯಯನ ಪೀಠದ ಬಗ್ಗೆ ನಡೆದ ಸಭೆಯಲ್ಲಿ ಡಾ. ಶಾಲಿನಿ ರಜನೀಶ್ ಅವರು ಅಧ್ಯಯನ ಪೀಠವನ್ನು ಶೀಘ್ರದಲ್ಲೇ ಸ್ಥಾಪಿಸುವ ಭರವಸೆಯನ್ನು ನೀಡಿರುತ್ತಾರೆ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜು: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9868347461

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ

ದೆಹಲಿ ಕರ್ನಾಟಕ ಸಂಘದಲ್ಲಿ

# ತಿಂಗಳ ಕಾರ್ಯಕ್ರಮ

**15 ನವೆಂಬರ್ 2014** ಶನಿವಾರ ಮಧ್ಯಾಹ್ನ 3.00ಗಂಟೆಗೆ

ಪವನ್ ಕುಮಾರ್ ನಿರ್ದೇಶನದ
ಸತೀಶ್ ನೀನಾಸಂ ಮತ್ತು ಶೃತಿ ಹರಿಹರನ್ ಅಭಿನಯದ
ಲೂಸಿಯಾ-ಚಲನಚಿತ್ರ ಪ್ರದರ್ಶನ

**16 ನವೆಂಬರ್ 2014** ಭಾನುವಾರ ಮಧ್ಯಾಹ್ನ 12.45ಗಂಟೆಗೆ

ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ
ರೆಮೋ'ಸ್ ಮ್ಯೂಸಿಕ್ ಸ್ಪಾರ್ಕ್

**22 ನವೆಂಬರ್ 2014** ಶನಿವಾರ ಮಧ್ಯಾಹ್ನ 2.30ಗಂಟೆಗೆ

ಪಿ. ಕುಮಾರ್ ನಿರ್ದೇಶನದ
ಕಿಚ್ಚ ಸುದೀಪ್ ಅಭಿನಯದ
ವಿಷ್ಣುವರ್ಧನ-ಚಲನಚಿತ್ರ ಪ್ರದರ್ಶನ

ಶನಿವಾರ ಸಂಜೆ 5.00ಗಂಟೆಗೆ

ಸ್ಥಳ : ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾ ಭವನ
**ಸಾಹಿತ್ಯ ವೈವಿಧ್ಯ : 'ಏಕೀಕೃತ ಕರ್ನಾಟಕ-ಹೊಸ ಸವಾಲುಗಳು'**
ಕುರಿತು ಚರ್ಚೆ

**29 ನವೆಂಬರ್ 2014** ಶನಿವಾರ ಮಧ್ಯಾಹ್ನ 2.30ಗಂಟೆಗೆ

ಶಶಾಂಕ್ ನಿರ್ದೇಶನದ
ರಾಧಿಕಾ ಪಂಡಿತ್, ಶುಭಪಂಜ್ ಅಭಿನಯದ
ಮೊಗ್ಗಿನ ಮನಸು-ಚಲನಚಿತ್ರ ಪ್ರದರ್ಶನ

**30 ನವೆಂಬರ್ 2014** ಭಾನುವಾರ ಮಧ್ಯಾಹ್ನ 12.45ಗಂಟೆಗೆ

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ
ವಾರ್ಷಿಕೋತ್ಸವದ ಆಟೋಟ-ಸಾಂಸ್ಕೃತಿಕ ಸ್ಪರ್ಧೆ
ಮತ್ತು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ
ಬಹುಮಾನ ವಿತರಣೆ ದೆಹಲಿ ಕನ್ನಡ ಕಲಾವಿದರಿಂದ
ಜಾನಪದ ಸಮೂಹ ನೃತ್ಯ ಪ್ರದರ್ಶನ

**5,6 ಮತ್ತು 7 ಡಿಸೆಂಬರ್ 2014** ಶುಕ್ರವಾರ ಸಂಜೆ 5.00ಗಂಟೆಗೆ

ರಾಷ್ಟ್ರೀಯ ವಿಚಾರ ಸಂಕಿರಣ ಪಂಚ ದ್ರಾವಿಡ ಭಾಷೆಗಳ
ಜಾನಪದದ ದಾಖಲೀಕರಣ, ಸಂರಕ್ಷಣೆ ಮತ್ತು ಪೋಷಣೆ
ಹಾಗೂ ಜಾನಪದ ಕಲಾ ಪ್ರದರ್ಶನ.

ಭಾರತದಾದ್ಯಂತದಿಂದ ಆಗಮಿಸುವ 50 ಜನ ವಿದ್ವಾಂಸರು ಈ
ವಿಚಾರ ಸಂಕಿರಣದಲ್ಲಿ ಭಾಗವಹಿಸಲಿದ್ದಾರೆ.
ಉದ್ಘಾಟನೆ 5ನೇ ಡಿಸೆಂಬರ್ ಶುಕ್ರವಾರ ಸಂಜೆ 5.00ಗಂಟೆಗೆ

## ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರ ಕಲಾ ಪ್ರದರ್ಶನ

**12 ರಿಂದ 14 ನವೆಂಬರ್ 2014**

**ಯಮನೂರಸಾಬ. ವೈ** ಅವರಿಂದ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

## ದೆಹಲಿಯಲ್ಲಿ ಕನ್ನಡದ ಕಾರ್ಯಕ್ರಮ

**13 ಮತ್ತು 14 ಡಿಸೆಂಬರ್ 2014** ಶನಿವಾರ ಬೆಳಿಗ್ಗೆ 10.00ಗಂಟೆಗೆ

ವಿಶ್ವ ಒಕ್ಕಲಿಗರ ಮಹಾವೇದಿಕೆ (ರಿ) ಬೆಂಗಳೂರು ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘ ಮತ್ತು ದೆಹಲಿಯ ಎಲ್ಲಾ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸುವ

**ನಾಡಪ್ರಭು ಕೆಂಪೇಗೌಡರ ರಾಷ್ಟ್ರೀಯ ಉತ್ಸವ**

## ವಧೂ-ವರರ ಮಾಹಿತಿ

ಕರ್ನಾಟಕದಿಂದ ದೆಹಲಿಗೆ ಬಂದು ನೆಲೆನಿಂತ ಹಲವಾರು ಕನ್ನಡಿಗರು ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿರುತ್ತಾರೆ. ಇದರಲ್ಲಿ ಮುಖ್ಯವಾಗಿ ತಮ್ಮ ಮಕ್ಕಳ ವಿವಾಹದ ಕುರಿತು ಹೆಚ್ಚು ಸಮಸ್ಯೆಗಳಿಗೆ ಒಳಗಾಗುತ್ತಾರೆ. ಇದನ್ನು ಮನಗಂಡ ದೆಹಲಿ ಕರ್ನಾಟಕ ಸಂಘವು ಹುಡುಗ-ಹುಡುಗಿಯರ ಮಾಹಿತಿಯನ್ನು ಸಂಗ್ರಹಿಸುತಿದೆ.



ದೆಹಲಿಯಲ್ಲಿರುವ ಕರ್ನಾಟಕದ ಪೋಷಕರು/ಹುಡುಗ/ಹುಡುಗಿಯರು ಪ್ರತಿ ಭಾನುವಾರ ಸಂಜೆ ಸಂಘದ ಕಾರ್ಯಾಲಯಕ್ಕೆ ಬಂದು ಸಂಘದಲ್ಲಿರುವ ಮಾಹಿತಿಯನ್ನು ನೋಡಬಹುದು. ಹಾಗೂ ಮಾಹಿತಿಯನ್ನು ನೋಂದಾಯಿಸಬಹುದು. ನೋಂದಣಿ ಉಚಿತವಾಗಿರುತ್ತದೆ. ವೈವಾಹಿಕ ಸಂಬಂಧಗಳ ಕುರಿತು ಪೋಷಕರು/ಹುಡುಗ/ಹುಡುಗಿಯರು ಪರಸ್ಪರ ವ್ಯವಹರಿಸಿಕೊಳ್ಳತಕ್ಕದ್ದು. ಸಂಬಂಧಗಳ ಕುರಿತು ಸಂಘ ಯಾವುದೇ ರೀತಿಯ ವ್ಯವಹಾರ ಮಾಡುವುದಿಲ್ಲ ಮತ್ತು ಜವಾಬ್ದಾರರಾಗುವುದಿಲ್ಲ. ಅ

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ನವೆಂಬರ್ 2014ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ನವೆಂಬರ್ 2014ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 30 ನವೆಂಬರ್ 2014 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 30 ನವೆಂಬರ್ 2014 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615, 26104818**

## ಜೆಎನ್‌ಯುನಲ್ಲಿ ಕನ್ನಡ ಪೀಠ ಸ್ಥಾಪನೆಯಿಂದ

# ಕನ್ನಡ ಭಾಷೆಗೆ ರಾಷ್ಟ್ರೀಯ ಹಾಗೂ ಜಾಗತಿಕ ಮನ್ನಣೆ ಸಾಧ್ಯ

ದೆಹಲಿ ಕರ್ನಾಟಕ ಸಂಘದ 'ಸಾಹಿತ್ಯ ವೈವಿಧ್ಯ' ಕಾರ್ಯಕ್ರಮದಲ್ಲಿ ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಆರಂಭಿಸಬೇಕಾದ ಅಗತ್ಯತೆಯ ಕುರಿತು ವಿವರವಾದ ಚರ್ಚೆ ನಡೆಯಿತು.

ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ತುಂಬ ತುರ್ತಾಗಿ ಸರಕಾರವು ರಾಜಧಾನಿಯಲ್ಲಿ ಕರ್ನಾಟಕ ಅಧ್ಯಯನ ಕೇಂದ್ರವನ್ನು ತೆರೆಯಬೇಕು. ಸದ್ಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯವು ಕನ್ನಡ ಅಧ್ಯಯನ ಕೇಂದ್ರವನ್ನು ತೆರೆಯಲು ಒಪ್ಪಿದ್ದರಿಂದ ಈ ಅವಕಾಶವನ್ನು ಕರ್ನಾಟಕ ಸರಕಾರ ಸದ್ವಿನಿಯೋಗಪಡಿಸಿಕೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಕನ್ನಡ ಅಧ್ಯಯನ ಕೇಂದ್ರವನ್ನು ಆರಂಭಿಸುವುದರಿಂದ, ಕರ್ನಾಟಕದಲ್ಲಿಯೇ ಕನ್ನಡವು ನೆಲೆ ತಪ್ಪುತ್ತಿರುವ ಇಂದಿನ ಸಂದರ್ಭದಲ್ಲಿ ಇಂಥ ಕೇಂದ್ರಗಳು ಕನ್ನಡ ಓದುವ ಮಕ್ಕಳ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ. ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಸ್ತಿತ್ವ ಇದೆ ಎಂಬುದನ್ನು ನಾವು ಸಾಬೀತು ಪಡಿಸದೇ ಹೋದರೆ, ಕನ್ನಡ ಕಲಿಯಲು ಈ ಕಾಲದ ಮಕ್ಕಳು ಮುಂದೆ ಬರುವುದಿಲ್ಲ.

ರಾಜ್ಯದ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಸಮರ್ಥವಾಗಿ ಮಂಡಿಸಿ, ಕೇಂದ್ರ ಸರಕಾರವನ್ನು ಹೇಗೋ ಹಾಗೆ, ಇತರ ಭಾಷಿಕ ಸಂಸದರನ್ನು ತನ್ನೆಡೆಗೆ ಆಕರ್ಷಿಸುವಂತ ಪ್ರತಿಭಾವಂತ ಸಂಸದರಿಗೆ ರಾಜ್ಯ, ರಾಷ್ಟ್ರ, ಭಾಷೆ, ಅಭಿವೃದ್ಧಿ, ಆಧುನಿಕ ತಂತ್ರಜ್ಞಾನ ಮತ್ತಿತರ ವಿಷಯಗಳ ಬಗೆಗೆ ಮಾಹಿತಿ ನೀಡುವ ಕೇಂದ್ರವಾಗಿ ಜೆಎನ್‌ಯು ಕನ್ನಡ ಅಧ್ಯಯನ ಕೇಂದ್ರ ಕೆಲಸ ಮಾಡುತ್ತದೆ. ಜೆಎನ್‌ಯುವಿನ ಅಧ್ಯಯನ ವಿಭಾಗಳು ತುಂಬಾ ಮುಕ್ತವಾಗಿರುವುದರಿಂದ ಅಲ್ಲಿ ಇಂಥ ಅನೇಕ ಕೆಲಸಗಳನ್ನು ಮಾಡಲು ಸಾಧ್ಯ.

ನಮ್ಮ ದೇಶದ ಇತರ ರಾಜ್ಯಗಳ ಜೊತೆಗೆ, ಮತ್ತು ಜಗತ್ತಿನ ಹಲವು ದೇಶಗಳ ಜೊತೆಗೆ ಒಂದು ಬಗೆಯ ಬೌದ್ಧಿಕ ಅನುಸಂಧಾನ ಏರ್ಪಡಬೇಕಾದ್ದು ಕರ್ನಾಟಕದ ಇಂದಿನ ಅಗತ್ಯಗಳಲ್ಲೊಂದು. ಜೆಎನ್‌ಯು ಅಂತಾರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯವಾದ್ದರಿಂದ ಈ ಬಗೆಯ ಅನುಸಂಧಾನ ಅಲ್ಲಿ ಸುಲಭವಾಗಿ ಸಾಧ್ಯವಾಗುತ್ತದೆ. ಈಗ ಇಲ್ಲಿ ಸುಮಾರು 40 ದೇಶಗಳ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಕನ್ನಡ ಅಧ್ಯಯನ ಕೇಂದ್ರ ಆರಂಭವಾದರೆ ಕನ್ನಡದ ಕಂಪು ಬೇರೆ ದೇಶಗಳಲ್ಲಿ ಹರಡಲು ಸಾಧ್ಯ. ಕನ್ನಡ ಭಾಷೆಯ ಸೃಜನಶೀಲ ನೆಲೆಗಳನ್ನು ಜಗತ್ತಿಗೆ ಪರಿಚಯಿಸುವ ಕೆಲಸ ತುರ್ತಾಗಿ ಆಗಬೇಕು. ಈ ವಿಷಯದಲ್ಲಿ ಬಾಂಗ್ಲಾ, ಹಿಂದಿ ಮತ್ತು ತಮಿಳು ಭಾಷೆಗಳು ನಮ್ಮಿಂದ ಒಂದು ಶತಮಾನದಷ್ಟು ಮುಂದಿವೆ.

ವಿದೇಶದ ಬಹಳ ವಿಶ್ವವಿದ್ಯಾಲಯಗಳಲ್ಲಿ ದಕ್ಷಿಣ ಏಷಿಯಾದ ಬಗ್ಗೆ ಅದರಲ್ಲೂ ವಿಶೇಷವಾಗಿ ಹಿಂದಿ, ಬಾಂಗ್ಲಾ, ಪಂಜಾಬಿ ಉರ್ದು ಮತ್ತು ತಮಿಳಿನ ಬಗ್ಗೆ ಬಗೆ ಬಗೆಯ ಅಧ್ಯಯನಗಳೂ ನಡೆಯುತ್ತಿವೆ. ದೆಹಲಿಯ ಸುತ್ತಮುತ್ತ ಹಿಂದಿ ಭಾಷೆ ಕಲಿಸಲು 13 ವಿದೇಶೀ ವಿಶ್ವವಿದ್ಯಾಲಯಗಳು ಕೆಲಸ ಮಾಡುತ್ತಿವೆ.ಆರು ವಿದೇಶೀ ವಿಶ್ವವಿದ್ಯಾಲಯಗಳು ತಮಿಳನ್ನು ಕಲಿಸುತ್ತಿವೆ. ಇದೇ ರೀತಿ ಪಂಜಾಬಿ (ಎರಡು ವಿಶ್ವವಿದ್ಯಾಲಯ), ಉರ್ದು (ನಾಲ್ಕು ವಿವಿಗಳು) ಮತ್ತಿತರ ಭಾಷೆಗಳನ್ನು ನಮ್ಮ ನೆಲದಲ್ಲಿಯೇ ಕಲಿಸಲಾಗುತ್ತಿದೆ. ವಿದೇಶದಲ್ಲಿ ಸುಮಾರು 27 ವಿದ್ಯಾಲಯಗಳಲ್ಲಿ ತಮಿಳನ್ನು ಕಲಿಸಲಾಗುತ್ತಿದೆ. ಹೀಗಾಗಿ ಈ ಭಾಷೆಗಳಿಗೆ ಅಂತಾರಾಷ್ಟ್ರೀಯ ವಿದ್ವಾಂಸರ ಒಂದು ದೊಡ್ಡ ಪಡೆಯೇ ಇದ್ದು ಭಾಷಾಂತರ ಮತ್ತಿತರ ಕೆಲಸಗಳು ನಿರಂತರವಾಗಿ ನಡೆಯುತ್ತಿವೆ. ಆದರೆ ಕನ್ನಡಕ್ಕೆ ಅಂಥ ಭಾಗ್ಯವಿಲ್ಲ.

ಒಟ್ಟಿನಿಂದ ಕರ್ನಾಟಕದ ಅಭಿವೃದ್ಧಿಯ ಬಗೆಗೆ ಹೆಚ್ಚು ಸೂಕ್ಷ್ಮವಾಗಿ ಮತ್ತು ವಿಸ್ತಾರವಾಗಿ ಈಗ ಯೋಚಿಸಬೇಕಾಗಿದೆ. ಅದರ ಮೊದಲ ಹೆಜ್ಜೆಯಾಗಿ ಜೆಎನ್‌ಯುವಿನಲ್ಲಿ ಕನ್ನಡ ಅಧ್ಯಯನ ಪೀಠ ಆರಂಭವಾಗಬೇಕು.

ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರ ಅಧ್ಯಕ್ಷತೆಯಲ್ಲಿ ನಡೆದ ಚರ್ಚೆಯಲ್ಲಿ ಡಾ. ಪುರುಷೋತ್ತಮ ಬಿಳಿಮಲೆ, ಡಾ. ಅಹಲ್ಯಾ ಚಿಂತಾಮಣಿ, ಶ್ರೀ ಸಖಾರಾಮ ಉಪ್ಪೂರು, ಡಾ. ಅವನೀಂದ್ರನಾಥ್ ರಾವ್, ಶ್ರೀಮತಿ ಎಸ್.ಸಿ. ಹೇಮಲತ, ಶ್ರೀ ವಿ.ವಿ. ಬಿರಾದಾರ, ಶ್ರೀ ಆನಂದ ಮುರಗೋಡ, ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ಚೆನ್ನು ಎಸ್. ಮಠದ, ಡಾ. ಸುಜಾತ ರೆಡ್ಡಿ, ಶ್ರೀ ಅಲೋಕ್ ರೈ, ಶ್ರೀ ಎಸ್.ವಿ. ನಿಂಗಪ್ಪ, ಡಾ. ಸಾಯಿಪ್ರಶಾಂತಿ ಶೆಟ್ಟಿ, ಶ್ರೀ ಮೃತ್ಯುಂಜಯ ಪಾಟೀಲ್, ಶ್ರೀ ನರಸಿಂಹ ಮೂರ್ತಿ, ಮತ್ತಿತರರು ಹಾಜರಿದ್ದರು. ಅ

*ಅಭಿಮತ ವರದಿ*



## ಜೆಎನ್‌ಯುನಲ್ಲಿ ಕನ್ನಡ ಅಧ್ಯಯನ ಪೀಠ

# ಪೀಠ ಮತ್ತು ತುಳು ಭಾಷೆಗೆ ರಾಜ್ಯದಲ್ಲಿ ಮನ್ನಣೆಗೆ ಸಚಿವರ ಭರವಸೆ

ಜವಹಾರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆ.ಎನ್.ಯು)ದಲ್ಲಿ ಕನ್ನಡ ಅಧ್ಯಯನ ಪೀಠದ ಸ್ಥಾಪನೆ ಮತ್ತು ತುಳು ಭಾಷೆಗೆ ಕರ್ನಾಟಕದಲ್ಲಿ ಅಧಿಕೃತ ಭಾಷೆಯ ಮನ್ನಣೆಯ ವಿಚಾರದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯ ವಸಂತ ಶೆಟ್ಟಿ ಬೆಳ್ಳಾರೆಯವರ ನೇತೃತ್ವದಲ್ಲಿ ನಿಯೋಗವೊಂದು ಕೇಂದ್ರ ಸರಕಾರದ ಸಚಿವರನ್ನು ಮತ್ತು ದೆಹಲಿಯ ಪ್ರಮುಖ ರಾಜಕಾರಣಿಗಳನ್ನು ದೆಹಲಿಯಲ್ಲಿ ಅಕ್ಟೋಬರ್ 13ರಂದು ಭೇಟಿಮಾಡಿತು.

ಕೇಂದ್ರ ಸರಕಾರದ ವಿಮಾನಯಾನ ಸಚಿವರಾದ ಶ್ರೀ ಜಿ.ಎಂ.ಸಿದ್ದೇಶ್ವರ ಅವರನ್ನು ಭೇಟಿಯಾದ ನಿಯೋಗಕ್ಕೆ ಸಚಿವರು ಜೆ.ಎನ್.ಯುವಿನಲ್ಲಿ ಕನ್ನಡ ಅಧ್ಯಯನ ಪೀಠ ಪ್ರಾರಂಭಿಸಲು ಹಾಗೂ ತುಳು ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿಸಲು ರಾಜ್ಯ ಸರಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

ನಿಯೋಗವು ಮಾಜಿ ಕೇಂದ್ರ ಸಚಿವರಾದ ಡಾ. ಎಂ. ವೀರಪ್ಪ ಮೊಯಿಲಿ ಮತ್ತು ಶ್ರೀ ಆಸ್ಕರ್ ಫರ್ನಾಂಡಿಸ್ ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಮನವಿಯನ್ನು ಸಲ್ಲಿಸಿತು.

ಕರ್ನಾಟಕದ ಪ್ರಮುಖ ಭಾಷೆಯಾದ ತುಳು ಭಾಷೆಯನ್ನು ಕರ್ನಾಟಕ ಸರಕಾರವು ರಾಜ್ಯದ ಅಧಿಕೃತ ಭಾಷೆಯೆಂದು ಪರಿಗಣಿಸಿ ಶೀಘ್ರವೇ ಅನುಷ್ಠಾನಗೊಳಿಸಲು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಲ್ಲಿ ಚರ್ಚಿಲಾಗುವುದು ಎಂದು ಶ್ರೀಮತಿ ಸೋನಿಯಾ ಗಾಂಧಿ ಅವರು ಕೂಡಾ ಭರವಸೆ ನೀಡಿದರು.

ನಿಯೋಗದ ಜತೆಗೆ ಕರ್ನಾಟಕದ ತುಳುನಾಡಿನ ಜಾನಪದ ಕುಣಿತವಾದ **'ಪಿಲಿವೇಷ'** (ಹುಲಿ ವೇಷ)ದ ತಂಡವೂ ಇದ್ದು, ಸಚಿವರ ಮತ್ತು ರಾಜಕಾರಣಿಗಳ ನಿವಾಸಗಳಲ್ಲಿ ಪ್ರದರ್ಶನವನ್ನು ನೀಡಿತು.

ತುಳು ಭಾಷೆ ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಎಂದೋ ಸೇರಬೇಕಾಗಿತ್ತು. ಹಲವು ಕಾರಣಗಳಿಂದ ಅದು ಇನ್ನೂ ಸೇರಿಲ್ಲ. ಇದೀಗ ಪರಿಚ್ಛೇದದಲ್ಲಿ ಸೇರಲು ಸುಮಾರು 36 ಭಾಷೆಗಳು ಪಟ್ಟಿಯಲ್ಲಿವೆ.





ಹೀಗಾಗಿ ಕರ್ನಾಟಕ ಸರಕಾರವು ತುಳು ಭಾಷೆಯನ್ನು ಕರ್ನಾಟಕದ ಅಧಿಕೃತ ಭಾಷೆಯನ್ನಾಗಿ ಪರಿಗಣಿಸಿದರೆ ಅದು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಲು ಅನುಕೂಲವಾಗುವುದು ಎಂದು ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಭೇಟಿಯಾದ ರಾಜಕಾರಣಿಗಳಿಗೆ ಮನದಟ್ಟು ಮಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ, ಜಂಟೀ ಕಾರ್ಯದರ್ಶಿ ಶ್ರೀಮತಿ ಹೇಮಲತ ಎಸ್.ಸಿ. ಕಾರ್ಯಕಾರಿ ಸದಸ್ಯರಾದ ಶ್ರೀ ಪಿ.ಸಿ. ಶ್ರೀನಿವಾಸ್, ಶ್ರೀ ರಾಧಾಕೃಷ್ಣ, ಶ್ರೀ ವಿ.ವಿ. ಬಿರಾದಾರ ಹಾಗೂ ದೆಹಲಿ ತುಳುಸಿರಿಯ ಕಾರ್ಯದರ್ಶಿ ಶ್ರೀ ಅಲೋಕ್ ರೈ ಅವರು ನಿಯೋಗದಲ್ಲಿ ಇದ್ದರು. ಅ

*ಅಭಿಮತ ವರದಿ*

# ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಜತೆ ಸಮಾಲೋಚನೆ

ದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು)ದಲ್ಲಿ ಕನ್ನಡ ಅಧ್ಯಯನ ಪೀಠದ ಸ್ಥಾಪನೆ ಮತ್ತು ಅದರ ರೂಪುರೇಷೆಗಳ ಕುರಿತು ದೆಹಲಿ ಕರ್ನಾಟಕ ಸಂಘದಲ್ಲಿ ಉನ್ನತ ಮಟ್ಟದ ಸಭೆಯೊಂದು ಇದೇ ಅಕ್ಟೋಬರ್ 31ರಂದು ನಡೆಯಿತು.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್, ಜೆಎನ್‌ಯುನ ರೆಕ್ಟರ್ ಶ್ರೀಮತಿ ಸುಧಾ ಪೈ, ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಸಂಘದ ಮಾಜೀ ಅಧ್ಯಕ್ಷರುಗಳಾದ ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಡಾ. ವೆಂಕಟಾಚಲ ಹೆಗಡೆ, ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಹಾಗೂ ಜೆಎನ್‌ಯು ಕನ್ನಡ ಅಧ್ಯಯನ ಪೀಠದ ಸಂಚಾಲಕರಾದ ಶ್ರೀ ಪಿ.ಸಿ. ಶ್ರೀನಿವಾಸ ಭಾಗವಹಿಸಿದ್ದರು.

ಶ್ರೀಮತಿ ಶಾಲಿನಿ ರಜನೀಶ್ ಮಾತನಾಡುತ್ತ ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಈ ಅಧ್ಯಯನ ಪೀಠ ಸ್ಥಾಪನೆಯ ಬಗ್ಗೆ ತೋರಿರುವ ಒಲವನ್ನು ಸಭೆಗೆ ತಿಳಿಸಿದರು. ಕನ್ನಡ ಅಧ್ಯಯನ ಪೀಠವು ಕರ್ನಾಟಕದ ವಿವಿಧ ಆಯಾಮಗಳನ್ನು ಕುರಿತು ಅಧ್ಯಯನ ಮಾಡಬೇಕಾದ ಅಗತ್ಯತೆ, ಕರ್ನಾಟಕದ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಪರಂಪರೆ, ಜಾನಪದ ಅರಸು ಮನೆತನಗಳ ಬಗ್ಗೆ ನಡೆಯಬೇಕಾದ ದಾಖಲಾತಿ, ಅಧ್ಯಯನ ಮುಂತಾದವುಗಳ ಮಹತ್ವದ ಬಗ್ಗೆ ಶ್ರೀಮತಿ ಶಾಲಿನಿ ರಜನೀಶ್ ಅವರು ಸಭೆಯಲ್ಲಿ ಚರ್ಚಿಸಿದರು. ಕನ್ನಡ ಅಧ್ಯಯನ ಪೀಠದ ರೂಪುರೇಷೆಗಳು, ಅವಶ್ಯಕವಿರುವ ಧನ ಸಹಾಯ ಹಾಗೂ ವಿಶ್ವವಿದ್ಯಾಲಯವು ಸ್ಥಾಪನೆಯಾಗಲಿರುವ ಕನ್ನಡ ಅಧ್ಯಯನ ಪೀಠವನ್ನು ಹೇಗೆ ನಿರ್ಧರಿಸುತ್ತದೆ ಮುಂತಾದ ವಿವರವನ್ನು ಅವರು ಕೋರಿದರು. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯವನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದ ಅವರು, ಸಾಧ್ಯವಾಗಬಹುದಾದ ಎಲ್ಲಾ ನೆರವನ್ನು ಸಂಘಕ್ಕೆ ಮಾಡುವ ಆಶ್ವಾಸನೆ ನೀಡಿದರು.




ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ದೆಹಲಿ ಕರ್ನಾಟಕ ಸಂಘವು ತಯಾರು ಮಾಡಿರುವ ರೂಪುರೇಷೆಗಳು ಮತ್ತು ಅದು ಅಧ್ಯಯನ ಪೀಠಕ್ಕೆ ಹೇಗೆ ಸಹಕಾರ ಕೊಡಬಹುದು ಎಂಬುದನ್ನು ವಿವರಿಸಿದರು. ಕನ್ನಡ ಅಧ್ಯಯನ ಪೀಠದ ಸಮನ್ವಯ ಸಮಿತಿಯ ಸದಸ್ಯರಾದ ಡಾ. ವೆಂಕಟಾಚಲ ಹೆಗಡೆಯವರು ಕೂಡಾ ಅಧ್ಯಯನ ಪೀಠವು ಕನ್ನಡಕ್ಕೆ, ಕರ್ನಾಟಕಕ್ಕೆ ಹೇಗೆ ಉಪಯೋಗವಾಗಬಲ್ಲದು ಹಾಗೂ ಪೀಠವನ್ನು ನಡೆಸುವ ವಿದ್ವಾಂಸರು ಬಹುಮುಖ ಪ್ರತಿಭೆಯುಳ್ಳವರಾಗಿರಬೇಕೆಂಬ ವಿಚಾರಗಳನ್ನು ಶ್ರೀಮತಿ ಶಾಲಿನಿ ರಜನೀಶ್ ಅವರ ಗಮನಕ್ಕೆ ತಂದರು.


ಸಮನ್ವಯ ಸಮಿತಿಯ ಸದಸ್ಯರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಕನ್ನಡ ಅಧ್ಯಯನ ಪೀಠವು ಕರ್ನಾಟಕದ ವಿವಿಧ ಆಯಾಮಗಳನ್ನು ಕುರಿತು ಅಧ್ಯಯನ ಮಾಡಬೇಕಾದ ಅಗತ್ಯ ಹಾಗೂ ಅನೇಕ ವಲಯಗಳಲ್ಲಿ ಸಂಶೋಧನೆ ಮಾಡುವ ವಿದ್ವಾಂಸರ ಕೊರತೆ ಕುರಿತು ಸಭೆಗೆ ತಿಳಿಸಿದರು. ಜೆಎನ್‌ಯು ಕನ್ನಡ ಅಧ್ಯಯನ ಪೀಠದ ಸಂಚಾಲಕರಾದ ಶ್ರೀ ಪಿ.ಸಿ. ಶ್ರೀನಿವಾಸ್ ವಂದನಾರ್ಪಣೆ ಸಲ್ಲಿಸಿದರು. ಅ

*ಅಭಿಮತ ವರದಿ*

# ರೂಪ ಮತ್ತು ಬಣ್ಣಗಳು ದೆಹಲಿಯ ವೀಕ್ಷಕರೊಂದಿಗೆ ಮಾತನಾಡಿದಾಗ...











ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಕರ್ನಾಟಕದ ಕಲಾವಿದರ ಕಲಾಕೃತಿಗಳ ಪ್ರದರ್ಶನವು ಅಕ್ಟೋಬರ್ 10ರಿಂದ 16ರ ವರಗೆ ನಡೆಯಿತು. ಬೆಂಗಳೂರಿನ ಶ್ರೀ ಲಿಂಗದೇವರು, ಕೊಡಗಿನ ಶ್ರೀ ಉ.ರಾ. ನಾಗೇಶ್, ಹಾಸನದ ಶ್ರೀ ಎಚ್.ಎಸ್. ಮಂಜುನಾಥ್, ಮೈಸೂರಿನ ಶ್ರೀ ಜಯದೇವಣ್ಣ ಅವರು ತಮ್ಮ ಅನುಭವ ಮತ್ತು ಭಾವನೆಗಳನ್ನು ವಿವಿಧ ಶೈಲಿ ಮತ್ತು ತಂತ್ರಗಾರಿಕೆಯಲ್ಲಿ ವ್ಯಕ್ತಪಡಿಸಿದ್ದರು.

ಅಂತಾರಾಷ್ಟ್ರೀಯ ಖ್ಯಾತ ಕಲಾವಿದರಾದ ರಾಮ್ ಸುತಾರ್ ಅವರು ಜ್ಯೋತಿ ಬೆಳಗಿಸಿ ಪ್ರದರ್ಶನಕ್ಕೆ ಚಾಲನೆ ನೀಡಿದರು.


ಕಲಾಕೃತಿಗಳನ್ನು ವೀಕ್ಷಿಸಿದ ಅವರು ಪ್ರತಿಯೊಂದು ಕಲಾಕೃತಿಯಲ್ಲೂ ಕಲಾವಿದರ ವ್ಯಕ್ತಿತ್ವ ಮತ್ತು ಅನುಭವಗಳು ಎದ್ದು ಕಾಣುತ್ತದೆ. ಅವರದೇ ಆದ ಶೈಲಿ ಮತ್ತು ತಂತ್ರಗಳನ್ನು ಕಂಡುಕೊಂಡಿದ್ದಾರೆ. ಬಣ್ಣಗಳಲ್ಲಿ ಭಾವನೆಗಳು ಮಾತನಾಡುವಂತಿದೆ. ಈ ಕಲಾವಿದರಿಗೆ ಉಜ್ವಲ ಭವಿಷ್ಯವಿದೆ ಎಂದು ಶುಭಕೋರಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಹೆಸರಾಂತ ಕಲಾವಿದರಾದ ಶ್ರೀಮತಿ ರುಕ್ಮಿಣಿ ಚಟರ್ಜಿಯವರು ಕಲಾಕೃತಿಗಳಲ್ಲಿ ನೈಜತೆ ಮತ್ತು ತಂತ್ರಗಾರಿಕೆ ಹೆಚ್ಚು ಪರಿಣಾಮಕಾರಿಯಾಗಿದೆ. ಈ ನಾಲ್ಕು ಕಲಾವಿದರ ಕಲಾಕೃತಿಗಳಲ್ಲಿ ಕರ್ನಾಟಕದ ಪರಂಪರೆಯನ್ನು ಕಾಣಬಹುದು. ಇವರ ಪ್ರಗತಿ ಉನ್ನತಿಯಾಗಲಿ ಎಂದು ಹಾರೈಸಿದರು.


ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಶುಭಕೋರಿದರು. ಕಲಾವಿದರಾದ ಶ್ರೀ ಅನಿಲ್ ಸುತಾರ್, ಶ್ರೀ ಸುಧೀರ್ ಫಡ್ನೀಸ್, ಶ್ರೀ ಆನಂದ ಮುರಗೋಡ, ಶ್ರೀ ಚೆನ್ನು ಎಸ್. ಮಠದ ಅವರುಗಳು ಉಪಸ್ಥಿತರಿದ್ದರು. ಈ ಕಲಾ ಪ್ರದರ್ಶನವು ಯಶಸ್ವಿಯಾಗಿದ್ದು ಉತ್ತರ ಮತ್ತು ದಕ್ಷಿಣದ ಕಲಾವಿದರಿಗೆ ಸೇತುವೆಯಾಗಿತ್ತು. ಅ

***ಅಭಿಮತ ವರದಿ***














# ದೆಕಸಂ ಆರ್ಟ್ ಗ್ಯಾಲರಿಯಲ್ಲಿ ಪಿ.ವಿ. ಬಿಂದು ಅವರ ಚಿತ್ರಕಲಾ ಪ್ರದರ್ಶನ



ಕರ್ನಾಟಕದ ಚಿತ್ರ ಕಲಾವಿದೆ ಶ್ರೀಮತಿ ಪಿ.ವಿ.ಬಿಂದು ಅವರ ಚಿತ್ರಕಲಾ ಪ್ರದರ್ಶನವನು ಕೇಂದ್ರ ಸಾಹಿತ್ಯ ಅಕಾಡೆಮಿಯ ಉಪ ಕಾರ್ಯದರ್ಶಿ ಶ್ರೀ ಮಹಾಲಿಂಗೇಶ್ವರ ಭಟ್ ಅವರು ಉದ್ಘಾಟಿಸಿದರು.



ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ ಈ ಆರ್ಟ್ ಗ್ಯಾಲರಿ ರಾಜಧಾನಿಯ ಮುಖ್ಯ ಪ್ರದೇಶದಲ್ಲಿ ಇದ್ದು ಕಲಾವಿದರಿಗೆ ಅನುಕೂಲಕರವಾಗಿದೆ ಎಂದರು.

ಕಲಾವಿದ ಸುಧೀರ್ ಪಢ್ನೀಸ್, ಚೆನ್ನು ಮಠದ್, ಮಹಾಲಿಂಗಪ್ಪ, ಡಾ.ವೈ. ಅವನೀಂದ್ರನಾಥ್ ರಾವ್, ಸಖಾರಾಮ ಉಪ್ಪೂರು, ಶಿವಾನಂದ ಇಂಗಳೇಶ್ವರ ಅವರು ಭಾಗವಹಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅ

***ಅಭಿಮತ ವರದಿ***

# ಸಂಘದಲ್ಲಿ ಹುಲಿ ವೇಷ ನೃತ್ಯ ಪ್ರದರ್ಶನ








ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಪಿಂಗಾರ ಕಲಾ ತಂಡ ಅವರಿಂದ ಹುಲಿ ವೇಷ ನೃತ್ಯ ಪ್ರದರ್ಶನವು ದೆಹಲಿ ಕರ್ನಾಟಕ ಸಂಘದಲ್ಲಿ ಅಕ್ಟೋಬರ್ 12ರಂದು ನಡೆಯಿತು. ಇದೇ ಸಂದರ್ಭದಲ್ಲಿ ಹಾಜರಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಲ್ಲಿಕಾರ್ಜುನ ಸ್ವಾಮಿ ವಿ.ಎಸ್. ಅವರು ಕಲಾವಿದರಿಗೆ ಮಾಲಾರ್ಪಣೆ ಮಾಡಿ ಪ್ರೋತ್ಸಾಹದ ನುಡಿಗಳನ್ನಾಡಿದರು.

ಯುವ ಕಲಾವಿದರು ತಮ್ಮ ಮೈಮೇಲೆ ಹಳದಿ, ಬಿಳಿ ಮತ್ತು ಕಂದು ಬಣ್ಣವನ್ನು ಬಳಿದು, ಹುಲಿಯ ಮುಖವಾಡವನ್ನಿಟ್ಟು ವಾದ್ಯ ಮತ್ತು ಡೋಲಿನ ದನಿಗೆ ಕುಣಿಯುತ್ತಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ದಸರಾ ಮತ್ತು ಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿ ಹುಲಿವೇಷಧಾರಿಗಳು ಮನೆಮನೆಗೆ ಹೋಗಿ ಕುಣಿಯುತ್ತಾರೆ. ಏಳರಿಂದ ಹದಿನೈದು ಜನರಿರುವ ಸುಮಾರು 100 ತಂಡಗಳು ಈಗ ಕರಾವಳಿ ಜಿಲ್ಲೆಗಳಲ್ಲಿವೆ. ಭೂತಾರಾಧನೆ ಮತ್ತು ಯಕ್ಷಗಾನದಂತೆ ಹುಲಿವೇಷವೂ ತುಳುನಾಡಿನ ವಿಶಿಷ್ಟ ಜನಪದ ಸಂಸ್ಕೃತಿಯ ಭಾಗವಾಗಿದೆ. ತಲೆಯನ್ನು ದೇಹದ ಹಿಂಭಾಗಕ್ಕೆ ಬಾಗಿಸಿ ಹಣದ ನೋಟನ್ನು ಬಾಯಿಯಿಂದ ಹೆಕ್ಕುವುದು, ವಿವಿಧ ರೀತಿಯ ಜಿಗಿತ ಮುಂತಾದ ಸಾಹಸಮಯ ನೃತ್ಯ ಪ್ರದರ್ಶನವನ್ನು ಹುಲಿ ವೇಷಧಾರಿಗಳು ಮಾಡಿ ಪ್ರೇಕ್ಷಕರನ್ನು ಮನರಂಜಿಸುತ್ತಾರೆ. ಅ

***ಅಭಿಮತ ವರದಿ***



# ದೆಹಲಿ ಕರ್ನಾಟಕ ಸಂಘದ ಡಾ. ಶಿವರಾಮ ಕಾರಂತ ಪ್ರಶಸ್ತಿ–2014 ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ

ದೆಹಲಿ ಕರ್ನಾಟಕ ಸಂಘವು 2014ರ ಸಾಲಿನ ಡಾ. ಕೋಟ ಶಿವರಾಮ ಕಾರಂತ ಪ್ರಶಸ್ತಿಯನ್ನು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿರುವ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ ನೀಡಲು ನಿರ್ಧರಿಸಿದೆ.

ಹಿರಿಯ ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ, ದೆಹಲಿಯಲ್ಲಿರುವ ಕನ್ನಡ ಪತ್ರಕರ್ತ ಶ್ರೀ ಡಿ. ಉಮಾಪತಿ ಹಾಗೂ ಸಂಚಾಲಕರಾಗಿ ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರನ್ನೊಳಗೊಂಡ ಆಯ್ಕೆ ಸಮಿತಿಯು ಸಂಘವು ಪ್ರತಿ ಎರಡು ವರ್ಷಗಳಿಗೊಮ್ಮೆ ನೀಡುವ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿಯನ್ನು ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ ನೀಡಲು ನಿರ್ಧರಿಸಿದೆ. ಪ್ರಶಸ್ತಿಯು 25 ಸಾವಿರ ರೂಪಾಯಿಗಳ ನಗದು, ಅಭಿನಂದನಾ ಪತ್ರ, ಸ್ಮರಣಿಕೆಗಳನ್ನೊಳಗೊಂಡಿದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಇದೇ ನವಂಬರ್ 16ರ ಭಾನುವಾರ ಸಂಜೆ ಐದು ಗಂಟೆಗೆ ಸಂಘದ ಸಭಾಂಗಣದಲ್ಲಿ ನಡೆಯಲಿದೆ.

ಡಾ. ಕೋಟ ಶಿವರಾಮ ಕಾರಂತರು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದರು. ಅವರ ಚಟುವಟಿಕೆಗಳಲ್ಲಿ ಸಾಹಿತ್ಯರಚನೆ, ರಂಗಭೂಮಿ, ಚಿತ್ರಕಲೆ, ಯಕ್ಷಗಾನ, ಪಠ್ಯಪುಸ್ತಕ ರಚನೆ, ಬಾಲವನ, ವಿಶ್ವಕೋಶ ರಚನೆ ಇತ್ಯಾದಿಗಳು ಸೇರಿದ್ದವು. ಅದೇ ಆಶಯದಂತೆ 21ನೇ ಶತಮಾನದ ಬದಲಾಗುತ್ತಿರುವ ಸಾಮಾಜಿಕ ಸಂದರ್ಭಕ್ಕೆ ಸರಿ ಹೊಂದಿಸಿ ಕೆಲಸ ಮಾಡುತ್ತಿರುವವರಲ್ಲಿ ಶ್ರೀ ಕೋಟಿಗಾನಹಳ್ಳಿ ರಾಮಯ್ಯನವರು ಪ್ರಮುಖರು. ಅವರು ಕೋಲಾರದಲ್ಲಿ 'ಅದಿಮ' ಎಂಬ ಸಂಸ್ಥೆಯನ್ನು ಕಟ್ಟಿ ಆ ಮೂಲಕ ರಂಗಭೂಮಿ, ಶಿಕ್ಷಣ, ಸಂಘಟನೆ ಮತ್ತು ಹೋರಾಟ ಮಾಡುತ್ತಾ ಬಂದಿದ್ದಾರೆ. ಈ ಕಾರಣದಿಂದ ಶ್ರೀ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ 2014ರ ಸಾಲಿನ ಸಂಘದ 'ಡಾ. ಕೋಟ ಶಿವರಾಮ ಕಾರಂತ ಪ್ರಶಸ್ತಿ' ನೀಡಿ ಗೌರವಿಸಲಾಗುವುದು.

ಡಾ.ಕಾರಂತರ ಆಸಕ್ತಿಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು ದೆಹಲಿ ಕರ್ನಾಟಕ ಸಂಘವು ಶಿವರಾಮ ಕಾರಂತ ಅವರ ಸವಿ ನೆನಪಿನಲ್ಲಿ 1998ರಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಆರಂಭ ಮಾಡಿದ್ದು ಮೊದಲ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಮಹತ್ತರ ಸಾಧನೆಗಾಗಿ ಡಾ.ಯಶವಂತ ಚಿತ್ತಾಲ, ದ್ವಿತೀಯ ಪ್ರಶಸ್ತಿಯನ್ನು ವಿಜ್ಞಾನ ಮತ್ತು ಪರಿಸರ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ ಶ್ರೀ ಜಿ.ಟಿ. ನಾರಾಯಣರಾವ್, ತೃತೀಯ ಪ್ರಶಸ್ತಿಯನ್ನು ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಶ್ರೀ ಬನ್ನಂಜೆ ಸಂಜೀವ ಸುವರ್ಣ ಹಾಗೂ ಪರಿಸರ ಕ್ಷೇತ್ರದಲ್ಲಿ ಸಾಧನೆಗೈದ ಶ್ರೀಮತಿ ಸಾಲುಮರದ ತಿಮ್ಮಕ್ಕನವರಿಗೆ ನೀಡಿದೆ. ಅ

***ಅಭಿಮತ ವರದಿ***

## ಕೋಟಿಗಾನಹಳ್ಳಿ ರಾಮಯ್ಯ

ಕೋಲಾರದ ಕೋಟಿಗಾನ ಹಳ್ಳಿಯಲ್ಲಿ 1954ರಲ್ಲಿ ಜನಿಸಿದ ರಾಮಯ್ಯನವರು ಒಬ್ಬ ಹೋರಾಟಗಾರ, ಕವಿ ಹಾಗೂ ನಾಟಕಕಾರ. ಕೋಲಾರದ ಹತ್ತಿರದ ಅಂತರಗಂಗೆ ಬೆಟ್ಟದಲ್ಲಿ ನೆಲಮೂಲ ಸಂಸ್ಕೃತಿಯನ್ನು ಸಾರುವ 'ಆದಿಮ' ಸಾಂಸ್ಕೃತಿಕ ಸಂಸ್ಥೆಯನ್ನು ಕಟ್ಟಿ ಅಲ್ಲಿ ಮಕ್ಕಳಿಗೆ ರಂಗಭೂಮಿ, ಸಿನಿಮಾ ಮತ್ತು ಶಿಕ್ಷಣದ ಕುರಿತು ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದಾರೆ.


ಅವರು ಚಲನಚಿತ್ರ ಮತ್ತು ಟಿವಿ ಧಾರಾವಾಹಿಗಳ ಸಂಭಾಷಣೆ ಮತ್ತು ಗೀತೆರಚನೆಯನ್ನೂ ಮಾಡಿದ್ದಾರೆ. ಲಂಕೇಶ್ ಪತ್ರಿಕೆ, ಮುಂಗಾರು ಮತ್ತು ಸುದ್ದಿ ಸಂಗಾತಿ ಪತ್ರಿಕೆಗಳಲ್ಲಿ ಪತ್ರಕರ್ತರಾಗಿಯೂ ಕೆಲಸಮಾಡಿದ್ದಾರೆ. ಸಿಂದ್‌ಮಾದಿಗರ ಸಂಸ್ಕೃತಿ, ಕಾಗೆ ಕಣ್ಣು ಇರುವೆ ಬಾಲ, ರತ್ನಪಕ್ಷಿ, ಕಣ್ಣಾಸ್ಪತ್ರೆ ಕ್ಯೂನಲ್ಲಿ ಜಗದಾಂಬೆ, ಹಕ್ಕಿ ಹಾಡು, ಒಗಟಿನ ರಾಣಿ, ಸುಮ್‌ಸುಮ್ಕೆ, ಕತ್ತಲೆ ರಾಜ್ಯ ಮೊದಲಾದವು ಇವರ ಕೆಲವು ಕೃತಿಗಳು.

ಕಾಲೇಜು ಶಿಕ್ಷಣವನ್ನು ಅರ್ಧದಲ್ಲಿಯೇ ಬಿಟ್ಟ ಅವರು ತಮ್ಮ ಬದುಕಿನ ಆರಂಭದಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಸೇರಿ ಅಸ್ಪೃಶ್ಯತೆ ಮತ್ತು ಜಾತಿಯಾಧಾರಿತ ಶೋಷಣೆಗಳ ವಿರುದ್ಧ ಹೋರಾಟ ನಡೆಸಿದರು. ಕಳೆದ ಮಹಾಚುನಾವಣೆಯಲ್ಲಿ ಕೋಲಾರ ಲೋಕಸಭಾ ಕ್ಷೇತ್ರದಿಂದ ಆಮ್ ಆದ್ಮಿ ಪಕ್ಷದಿಂದ ಚುನಾವಣೆಗೂ ಸ್ಪರ್ಧಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಇವರು ಪಡೆದಿದ್ದಾರೆ. ಅ

***ಅಭಿಮತ ವರದಿ***

# ದೆಹಲಿ ಕರ್ನಾಟಕ ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ

***ಪ್ರತಿ ವರ್ಷದಂತೆ ಈ ವರ್ಷವೂ ದೆಹಲಿ ಕರ್ನಾಟಕ ಸಂಘವು ನೀಡುವ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಘೋಷಿಸಲಾಗಿದೆ. ಚಿತ್ರ ಕಲಾವಿದ ಕೆ.ಆರ್. ಸುಬ್ಬಣ್ಣ ಮತ್ತು ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಎಂ. ಶಿರೂರ್ ಅವರಿಗೆ ಪ್ರಶಸ್ತಿಯನ್ನು ನವೆಂಬರ್ ೩೦ರಂದು ನಡೆಯುವ ವಿಶೇಷ ಸಮಾರಂಭದಲ್ಲಿ ನೀಡಲಾಗುವುದು.***



## ಕೆ.ಆರ್. ಸುಬ್ಬಣ್ಣ

ಚಿತ್ರಕಲೆಯಲ್ಲಿ ಅಂತರರಾಷ್ಟ್ರೀಯ ಕಲಾವಿದರಾಗಿರುವ ಕೆ.ಆರ್. ಸುಬ್ಬಣ್ಣ ಅವರು ಜನಿಸಿದ್ದು 1952ರಲ್ಲಿ. ದಾವಣಗೆರೆಯ ಸ್ಕೂಲ್ ಆಫ್ ಆರ್ಟ್ ಅಂಡ್ ಕ್ರಾಫ್ಟ್‌ನಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಮತ್ತು ದೆಹಲಿಯ ಕಾಲೇಜ್ ಆಫ್ ಆರ್ಟ್‌ನಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ದೆಹಲಿಯ ಕನ್ನಡ ಶಾಲೆಯಲ್ಲಿ 1978ರಿಂದ 2012ರವರೆಗೆ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿರುವರು.

ಕಲಾವಿದರಾಗಿ ನಾಡು, ಹೊರನಾಡು ಮಾತ್ರವಲ್ಲದೆ ಇಂಗ್ಲೆಂಡ್, ದಕ್ಷಿಣಕೊರಿಯಾ, ಅಮೇರಿಕ, ಕೆನಡಾ, ಫ್ರಾನ್ಸ್, ಇಟಾಲಿ ಮತ್ತು ಜಪಾನ್ ಮೊದಲಾದ ದೇಶಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಸ್ವೀಡನ್, ಡೆನ್ಮಾರ್ಕ್, ನೇಪಾಳ ಸೇರಿದಂತೆ ಹಲವು ದೇಶಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿರುವ ಇವರು ವಿಶ್ವದಾದ್ಯಂತ ಶಿಷ್ಯರನ್ನು ಹೊಂದಿದ್ದಾರೆ.

ಇಂದಿರಾಗಾಂಧಿ ಕಲಾಕೇಂದ್ರ ಮತ್ತು ದೂರದರ್ಶನ ಇವರ ಸಾಧನೆಯ ಕುರಿತು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿ ಪ್ರಸಾರ ಮಾಡಿದೆ. ದೇಶ ವಿದೇಶಗಳಲ್ಲಿ ವಿವಿಧ ಕಲಾಕೇಂದ್ರಗಳ ಆಡಳಿತ ಮಂಡಳಿ ಮತ್ತು ಆಯ್ಕೆ ಸಮಿತಿಯ ಸದಸ್ಯರಾಗಿ ದುಡಿದ ಸುಬ್ಬಣ್ಣ ಅವರು ಕೇಂದ್ರ ಲಲಿತಾ ಕಲಾ ಅಕಾಡೆಮಿಯ ಅಧ್ಯಕ್ಷ ಹುದ್ದೆಗೆ ಏರಿದ ಪ್ರಥಮ ಕನ್ನಡಿಗ.

ಅನೇಕ ಪ್ರಶಸ್ತಿ ಪುರಸ್ಕಾರ ಪಡೆದ ಸುಬ್ಬಣ್ಣ ಅವರು ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿ, ಕೇಂದ್ರ ಲಲಿತಾ ಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದಾರೆ. ಫ್ರೆಂಚ್ ಸರ್ಕಾರ ಸ್ಕಾಲರ್ ಶಿಫ್ ಮತ್ತು ಇಂಗ್ಲೆಂಡ್‌ನ 'ಚಾರ್ಲ್ಸ್ ವ್ಯಾಲೇಸ್ ಇಂಡಿಯಾ ಟ್ರಸ್ಟ್' ಪುರಸ್ಕಾರಗಳು ಅವರಿಗೆ ಸಂದಿದೆ. ಅ

## ಟಿ.ಎಂ. ಶಿರೂರು

ಧಾರವಾಡ ಜಿಲ್ಲೆಯ ರಾಣೆ ಬೆನ್ನೂರಿನಲ್ಲಿ 1934ರಲ್ಲಿ ಟಿಎಂ. ಶಿರೂರು ಜನಿಸಿದರು. ಮುಂಬೈ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ನವದೆಹಲಿಯ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಶನ್‌ನಿಂದ ಪತ್ರಿಕೋದ್ಯಮದಲ್ಲಿ ಪದವಿ ಪಡೆದಿದ್ದಾರೆ.

ಆಗಿನ ಮುಂಬಾಯಿ ಸಚಿವಾಲಯದದಲ್ಲಿ 1955ರಲ್ಲಿ ವೃತ್ತಿ ಆರಂಭಿಸಿದ ಇವರು ಮುಂಬೈ ಸರಕಾರದ ಮುಖ್ಯಮಂತ್ರಿ ಮೊರಾರ್ಜಿ ದೇಸಾಯಿ ಅವರಿಗೆ ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಮುಂದೆ ಕರ್ನಾಟಕ ಸರ್ಕಾರದ ಮಾಹಿತಿ ಮತ್ತು ಪ್ರಕಟಣಾಲಯ ವಿಭಾಗದ ಅಧಿಕಾರಿಯಾಗಿ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಸೇವೆ ಸಲ್ಲಿಸಿದರು.

ಗೋವಾದಲ್ಲಿ ಸೇವೆಯಲ್ಲಿದ್ದಾಗ ಗೋವಾ ಕನ್ನಡ ಸಂಘದ ಅಧ್ಯಕ್ಷರಾಗಿ ಐದು ವರ್ಷಗಳ ಕಾಲ ಅಲ್ಲಿ ಅರ್ಥಪೂರ್ಣ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. 1973ರಲ್ಲಿ ದೆಹಲಿಯ ಕರ್ನಾಟಕ ಮಾಹಿತಿ ಕೇಂದ್ರದ ಉಪ ನಿರ್ದೇಶಕರಾಗಿ ಇವರು ಇಲ್ಲಿ ಚಲನಚಿತ್ರ, ಕಲಾಪ್ರದರ್ಶನ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದರು. 1991ರಲ್ಲಿ ನಿವೃತ್ತಿಯಾಗುವ ಮೊದಲು ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು, ಬಂಗಾರಪ್ಪ ಸೇರಿದಂತೆ 9 ಮಂದಿ ಮುಖ್ಯಮಂತ್ರಿಗಳ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಯುರೋಪ್, ಅಮೆರಿಕ, ಸಿಂಗಾಪುರ ಹಾಗೂ ಮಲೇಷಿಯಾ ದೇಶಗಳಿಗೂ ಇವರು ಪ್ರವಾಸ ಮಾಡಿದ್ದಾರೆ. ಹಿಂದೂಸ್ತಾನಿ ಸಂಗೀತ ಪ್ರೇಮಿಯಾಗಿರುವ ಇವರು ನಿವೃತ್ತಿಯ ನಂತರವೂ ಪಂಡಿತ್ ರಾಜ್‌ಕಿಶೋರ್ ದಲ್ಬೇರ ಅವರಿಂದ ಕೊಳಲು ವಾದನ ಕಲಿಯುತ್ತಿರುವುದು ಇದಕ್ಕೆ ನಿದರ್ಶನ. ಅ



# ಸಂಘದಲ್ಲಿ 'ಗೋವಿಂದಾನಿ ಗೋವಿಂದ... ಗೋವಿಂದಾ' ಅಸಂಗತ ನಾಟಕದ ಅನಾವರಣ



ಶತಮಾನಗಳಿಂದ ನಾಟಕಗಳನ್ನು ಯಾವ ಮಾನದಂಡದಿಂದ ವಿಶ್ಲೇಷಿಸಲಾಗಿತ್ತೋ ಆ ಎಲ್ಲಾ ಮಾನದಂಡಗಳನ್ನು ಮುರಿದು ಹೊಸ ಆಲೋಚನಾಕ್ರಮದಲ್ಲಿ ನಡೆಸುವ ನಾಟಕಗಳು ಅಸಂಗತ ನಾಟಕಗಳು. ಸಾಮಾನ್ಯವಾಗಿ ನಾಟಕಗಳಲ್ಲಿ ಅತ್ಯಂತ ಸಿದ್ಧವಾದ ಪಾತ್ರಗಳನ್ನು ರೂಪಿಸಿದರೆ, ಅಸಂಗತ ನಾಟಕಗಳಲ್ಲಿ ಬರುವ ಪಾತ್ರಗಳನ್ನು ಗುರುತಿಸುವುದೇ ಕಷ್ಟ. ಶಿಷ್ಟ ನಾಟಕಗಳಲ್ಲಿ ಸಂಭಾಷಣೆಗಳು ಬೆಳೆಯುತ್ತಾ ಪ್ರೇಕ್ಷಕನನ್ನು ಮನರಂಜನೆಗೊಳಿಸಿದರೆ, ಅಸಂಗತ ನಾಟಕಗಳ ಸಂಭಾಷಣೆಯ ಜಾಡನ್ನು ಹಿಡಿದು ಹೋಗುವುದು ಪ್ರೇಕ್ಷಕನಿಗೆ ಸಾಹಸದ ಕೆಲಸ. ಸಾಮಾನ್ಯವಾಗಿರುವ ನಾಟಕಗಳಲ್ಲಿ ಆರಂಭ, ಮಧ್ಯಾವಧಿ ಮತ್ತು ಅಂತ್ಯಗಳಿದ್ದರೆ ಅಸಂಗತ ನಾಟಕಗಳು ಎಲ್ಲಿಂದಲೋ ಆರಂಭವಾಗಿ ಎಲ್ಲಿಯೋ ಅಂತ್ಯವಾಗುತ್ತವೆ. ಅಸಂಗತ ನಾಟಕಗಳು ಯಾವುದೇ ಸಾಮಾಜಿಕ, ರಾಜಕೀಯ, ಧಾರ್ಮಿಕ ಅಥವಾ ನೈತಿಕ ನಿರ್ಣಯಗಳನ್ನು ನೀಡದೇ ನಿರ್ಲಿಪ್ತತೆಯ ಆಘಾತವನ್ನು ನೀಡುತ್ತವೆ. ನಂಬಿಕೆಗಳ ಮೇಲಿನ ಭ್ರಮನಿರಶನ, ನಿರರ್ಥಕ ಎನಿಸುವ ಸಂಕೀರ್ಣತೆಗಳು ಅಸಂಗತ ನಾಟಕಗಳ ಮೌಲ್ಯಗಳಾಗಿವೆ.



ಮೊದಲ ಮಹಾಯುದ್ಧದ ಬಳಿಕ ಯುರೋಪಿನಲ್ಲಿ ಸರ್ವಾಧಿಕಾರದ ದಬ್ಬಾಳಿಕೆ ನಡೆಯಿತು. ಕಾರ್ಲ್ ಮಾರ್ಕ್ಸ್‌ನು ಪ್ರತಿಪಾದಿಸಿದ ಸಂಪೂರ್ಣ ಸಾಮಾಜಿಕ ಕ್ರಾಂತಿಯ ಆಶ್ವಾಸನೆಗೆ ಒಳಗಾಗಿದ್ದ ಸಮಾಜವು, ಸ್ಟಾಲಿನ್ ಸಂಯುಕ್ತ ಸೋವಿಯೆತ್ ರಾಷ್ಟ್ರದಲ್ಲಿ ಸರ್ವಾಧಿಪತ್ಯವನ್ನು ನಡೆಸಿದಾಗ ಭ್ರಮನಿರಶನಕ್ಕೆ ಒಳಗಾಯಿತು. ಯುರೋಪಿನಲ್ಲಿ ಹಿಟ್ಲರನ ಅಲ್ಪಕಾಲದ ಆಡಳಿತದಲ್ಲಿ ಎರಡನೇ ಮಹಾಯುದ್ಧದಲ್ಲಿ ನಡೆದ ಸಾಮೂಹಿಕ ಮತ್ತು ಜನಾಂಗೀಯ ಹತ್ಯೆಗಳಿಂದ ಅರಾಜಕತೆಯು ತಾಂಡವವಾಡಲು ಆರಂಭಿಸಿತು. ಯುದ್ಧಗಳ ನಂತರ ಯುರೋಪ್ ಮತ್ತು ಅಮೇರಿಕಾದ ಶ್ರೀಮಂತವಾಗಿದ್ದ ಸಮಾಜದಲ್ಲಿ ಆಧ್ಯಾತ್ಮಿಕತೆಯ ಖಾಲಿತನಗಳು ಗೋಚರಗೊಡವು. ಇಪ್ಪತ್ತನೇ ಶತಮಾನದ ಮಧ್ಯಕಾಲದ ಬುದ್ಧಿವಂತ ಮತ್ತು ಸೂಕ್ಷ್ಮ ಮನಸ್ಸಿನ ವ್ಯಕ್ತಿಗಳಿಗೆ ಬದುಕಿನಲ್ಲಿ ಅರ್ಥ ಹುಡುಕುವುದು ಕಷ್ಟವಾಯಿತು. ನಿಶ್ಚಲತೆಗಳು ಅಲುಗಾಡಿದವು. ಭರವಸೆಗಳಿಗೆ ಅರ್ಥವಿಲ್ಲವಾಯಿತು. ಬದುಕು ಕತ್ತಲೆಯ ಕೋಣೆಯಲ್ಲಿ ಸಿಳ್ಳು ಹೊಡೆಯುವಂತಹ ಅನುಭವವಾಯಿತು. ಬದುಕು ಅಸಂಗತವಾಯಿತು. ಆ ಅಸಂಗತತೆಯು ಜೀನ್ ಪಾಲ್ ಸಾರ್ತ್ರೆ, ಆಲ್ಬರ್ಟ್ ಕಮೂ, ಫ್ರಾಂಝ್ ಕಾಫ್ಕಾ, ಸಾಮ್ಯುವೆಲ್ ಬೆಕೆಟ್ ಮೊದಲಾದವರ ಸಾಹಿತ್ಯಿಕ ಕೃತಿಗಳಲ್ಲಿ ಬಿಂಬಿತಗೊಂಡವು.

ಈ ಹಿನ್ನಲೆಯಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ 'ದೆಹಲಿ ಮಿತ್ರ'ದಿಂದ ಅಕ್ಟೋಬರ್ 26ರಂದು ಪ್ರದರ್ಶನಗೊಂಡ ಸಖಾರಾಮ ಉಪ್ಪೂರ್ ಅವರ 'ಗೋವಿಂದಾನಿ ಗೋವಿಂದ ... ಗೋವಿಂದಾ' ಅಸಂಗತ ನಾಟಕ ಪ್ರದರ್ಶನವನ್ನು ನೋಡಿದಾಗ ಅಸಂಗತ ನಾಟಕಗಳು ಇಂದಿಗೂ ಪ್ರಯೋಗಾರ್ಹವಾಗಿವೆ ಮತ್ತು ಪ್ರೇಕ್ಷಕರು ಅವನ್ನು ಗಂಭೀರವಾಗಿಯೇ ತೆಗೆದುಕೊಳ್ಳುತ್ತಾರೆ ಎಂದನಿಸುತ್ತದೆ.

ಅಲ್ಪಕಾಲದ ತಾಲೀಮಿನ ಅನಾನುಕೂಲತೆಯಲ್ಲಿಯೂ, ಮುಖ್ಯವಾದ ಎರಡು ಪಾತ್ರಗಳಾದ ಗುರು (ಸಖಾರಾಮ) ಮತ್ತು ಶಿಷ್ಯ (ಚೆನ್ನು ಎಸ್. ಮಠದ) ಪಾತ್ರಗಳು ಅಸಂಗತತೆಯ ಅರಿವಿನ ಒಳಗೆ ಹೋಗಲು ಪ್ರಯತ್ನಿಸಿದ್ದವು. ಕೋಟಿ ದೇವರುಗಳನ್ನು ನಂಬುವ ಸಮಾಜಕ್ಕೆ ನಾಟಕದ ಪಾತ್ರಗಳು ಹೇಳುತ್ತವೆ: ಕಲಿಯುಗದಾಗೆ ಕಣ್ಣಿಗೆ ಕಾಣೋ ದೇವರು ಎರಡೇ, ಒಂದು ಆಂಜನೇಯ... ಹನುಮಂತ... ಮಂಗಣ್ಣ, ಇನ್ನೊಂದು ಹುತ್ತದೊಳಗಿನ ಹಾವು... ನಾಗರ ಹಾವು. ನಾಟಕದ ಗುರು ಹೇಳುತ್ತಾನೆ "ಜಗವೇ ಒಂದು ನಾಟಕ ರಂಗ. ಇಲ್ಲಿ ದಿನನಿತ್ಯ ಪವಾಡಗಳು ನಡೆಯುತ್ತಲೇ ಇರುತ್ತವೆ. ರಾಮ, ಕೃಷ್ಣ, ಏಸು, ಅಲ್ಲಾ ಹೀಗೆ ಎಲ್ಲ ದೇವರುಗಳ ಧರ್ಮಗಳ ಹೆಸರಿನಲ್ಲಿ ಪುಣ್ಯದ



ಕೆಲಸ ನಡೆಯುತ್ತಲೇ ಇರುತ್ತದೆ". ಆರಂಭದಲ್ಲಿ ನಾಟಕವು ನೈಜ ನಾಟಕವೋ ಎಂಬಂತೆ ಕಂಡು ಬಂದರೂ ದೃಶ್ಯಗಳು ಪಲ್ಲಟಗೊಂಡಂತೆ ರಂಗದ ಮೇಲೆ ಅಸಂಗತತೆಯು ಕ್ರಮೇಣ ಆವರಿಸಿತು. ಮೂರನೇ ದೃಶ್ಯದಲ್ಲಿ ಗುರುವು ಶಿಷ್ಯನ ಕುಶಲೋಪಚಾರವನ್ನು ವಿಚಾರಿಸುತ್ತಾನೆ ಅದಕ್ಕೆ ಶಿಷ್ಯನು "ಅಂದ್ರೆ, ಸುಮ್ಮಸುಮ್ಮನೆ ಕಾಟಾಚಾರಕ್ಕೆ ಕೇಳುತ್ತಿದ್ದೀರಿ ಅಂತ ಆಯ್ತು. ನಾನು ಹೇಗೆ ಹಾಳಾಗಿ ಹೋದರೂ ಪರವಾಗಿಲ್ಲ. ಒಟ್ಟು ಎದುರಿಗೆ ಸಿಕ್ಕಿದ್ದಕ್ಕೆ ಚೆನ್ನಾಗಿದ್ದಿಯಾ ಅಂತಿದ್ದೀರಿ, ಅಷ್ಟೇ ತಾನೇ?" ಅನ್ನುತ್ತಾನೆ.

ನಿಜಜೀವನದಲ್ಲಿ ವಾಚಾಳಿಯಾಗಿ ಕಂಡು ಬರುವ ಸ್ವಾಮಿಯ ಪಾತ್ರಕ್ಕೆ (ಅವನೀಂದ್ರನಾಥ್ ರಾವ್) ನಾಟಕ ರಚನೆ ಮತ್ತು ನಿರ್ದೇಶನ ಮಾಡಿದ ಸಖಾರಾಮ ಅವರು ಯಾವುದೇ ಸಂಭಾಷಣೆಯನ್ನು ನೀಡದೆ ಕುತೂಹಲಿ ಪ್ರೇಕ್ಷಕರಿಗೆ ಅಸಂಗತತೆಯ ಒಂದು ಮಬ್ಬನ್ನು ತೋರಿಸಿದರು.

ತಾಂತ್ರಿಕವಾಗಿ ನೋಡಿದರೆ ನಾಟಕದ ರಂಗ ಸಜ್ಜಿಕೆ, ಸಂಗೀತ ಮತ್ತು ಬೆಳಕು ಒಂದು ಸಿದ್ಧ ನಾಟಕದ ಪರಿಕಲ್ಪನೆಯ ಪರಿಣಾಮದಂತೆ ಕಂಡಿತು. ಶಿವಾನಂದ ಇಂಗಳೇಶ್ವರ್ ಅವರು ನಿಜವಾಗಿಯೂ ರಂಗದಲ್ಲಿ ಬೆಳಕಿನ ಮತ್ತು ನೆರಳಿನ ಅಸಂಗತತೆಯನ್ನು ಸೃಷ್ಟಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅಸಂಗತ ನಾಟಕದಲ್ಲಿ ಕೆಲವೊಂದು ನೈಜ ಅಸಂಗತಗಳು ನಡೆದಾಗ ಅವು ಅಸಂಬದ್ಧವಾಗುವುದು ಸಾಮಾನ್ಯ. ಅಭಿನಯ, ಸಂಗೀತ ಮತ್ತು ಸಂಭಾಷಣೆಯಲ್ಲಿ ಇಂತಹ ದೋಷಗಳು ಮೊದಲ ಪ್ರಯೋಗದಲ್ಲಿ ಬರುವುದು ಅಪರಾಧವಲ್ಲ ಎಂದುಕೊಳ್ಳಬೇಕು. ಅ

***ಬಾಲಕೃಷ್ಣ ನಾಯ್ಕ್ ಡಿ.***

# ಕರ್ನಾಟಕ ರಾಜ್ಯೋತ್ಸವಕ್ಕೆ ಚಾಲನೆ ನೂತನ ಪ್ರಸಾದನ ಕೊಠಡಿ ಆರಂಭ



ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಯಾಗಿರುವ ಶ್ರೀ ಅಪ್ಪಾಜಿ ನಾಡಗೌಡ ಅವರು ದೆಹಲಿ ಕರ್ನಾಟಕ ಸಂಘದ ನವೆಂಬರ್ ತಿಂಗಳಿಡೀ ನಡೆಯುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಕನ್ನಡ ಭುವನೇಶ್ವರಿಗೆ ದೀಪ ಬೆಳಗಿಸಿ ಧ್ವಜಾರೋಹಣ ಮಾಡಿ ವಿದ್ಯುಕ್ತವಾಗಿ ಶುಭಾರಂಭ ಮಾಡಿದರು. ನೆರೆದಿದ್ದ ನೂರಾರು ಮಂದಿ ಕನ್ನಡಿಗ ಮಹಿಳೆಯರು, ಮಕ್ಕಳು ಮತ್ತು ಮಹನೀಯರು ಹಾಗೂ ರಾಜ್ಯದಿಂದ ಬಂದಿದ್ದ ಹಾಗೂ ಸ್ಥಳೀಯ ಕಲಾವಿದರುಗಳು ಸೇರಿ ರಾಷ್ಟ್ರಗೀತೆ ಹಾಗೂ ನಾಡಗೀತೆಯನ್ನು ಹಾಡಿ ಸಂಭ್ರಮಸಿದರು.

ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ಅಪ್ಪಾಜಿ ನಾಡಗೌಡ ದಂಪತಿಗಳ ಸಮ್ಮುಖದಲ್ಲಿ ಸ್ಥಳೀಯ ಕಲಾವಿದರುಗಳು ಸೇರಿ ಸಂಭ್ರಮದಿಂದ ನೂತನವಾಗಿ ನಿರ್ಮಿಸಲಾಗಿರುವ ಸಂಘದ ಪ್ರಸಾದನ ಕೊಠಡಿಯನ್ನು (ಗ್ರೀನ್ ರೂಂ) ದೀಪ ಬೆಳಗಿಸಿ ಹಾಗೂ ಗುಲ್ಬರ್ಗಾದಿಂದ ಆಗಮಿಸಿದ್ದ ನೃತ್ಯ ಕಲಾವಿದೆ ಹಾಗೂ ತರಬೇತಿದಾರರಾದ ಶ್ರೀಮತಿ ಶುಭಾಂಗಿ ಅವರು ಸ್ಥಳೀಯ ಬಾಲ ಕಲಾವಿದರಿಗೆ ಬಣ್ಣ ಹಚ್ಚುವುದರ ಮೂಲಕ ನೂತನ ಪ್ರಸಾದನ ಕೊಠಡಿಯನ್ನು ಉದ್ಘಾಟಿಸಲಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಮುಖ್ಯ ಅತಿಥಿಗಳನ್ನು ಅಭಿನಂದಿಸಿದರು.



ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮುಖ್ಯ ಅತಿಥಿಗಳನ್ನು ಸ್ವಾಗತಿಸುತ್ತಾ ಸಂಘ ನಡೆದು ಬಂದ ರೀತಿ ಹಾಗೂ ನಡೆಸುತ್ತಿರುವ ಚಟುವಟಿಕೆಗಳು ಹಾಗೂ ಭವಿಷ್ಯದ ಕಾರ್ಯಕ್ರಮಗಳ ರೂಪುರೇಷೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಮುಖ್ಯ ಅತಿಥಿಗಳಾದ ಶ್ರೀ ನಾಡಗೌಡ ಅವರು ಮಾತನಾಡುತ್ತ ಸಂಘದ ಬೆಳವಣಿಗೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿ ಚಟುವಟಿಕೆಗಳನ್ನು ಶ್ಲಾಘಿಸಿ, ಸಂಘದ ಭವಿಷ್ಯದ ಕಾರ್ಯಯೋಜನೆಗಳಿಗೆ ಕರ್ನಾಟಕ ಸರ್ಕಾರದಿಂದ ಹಾಗೂ ತಮ್ಮಿಂದ ಸಾಧ್ಯವಾದ ಎಲ್ಲ ರೀತಿಯ ಸಹಕಾರವನ್ನು ನೀಡುವುದಾಗಿ ತಿಳಿಸಿದರು. ನೆರೆದಿದ್ದ ಎಲ್ಲ ಕನ್ನಡಿಗರಿಗೆ ತಮ್ಮ ಹಾಗೂ ಮುಖ್ಯಮಂತ್ರಿಗಳ ಪರವಾಗಿ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿದರು.

ಸಂಘದ ಕಾರ್ಯಕಾರಿ ಸಮಿತಿಯ ಶ್ರೀಮತಿ ಎಸ್.ಸಿ.ಹೇಮಲತ, ಶ್ರೀ ಟಿ.ಎಂ.ಮೈಲಾರಪ್ಪ, ಶ್ರೀಮತಿ ಆಶಾ ಶ್ಯಾಮ್ ಸುಂದರ್, ಶ್ರೀಮತಿ ಪೂಜಾ ಪ್ರದೀಪ್, ಶ್ರೀ ರಾಧಾಕೃಷ್ಣ, ಶ್ರೀ ಆನಂದ ಈಶ್ವರಪ್ಪ ಮುರಗೋಡ, ಶೀ ವಿ.ವಿ.ಬಿರಾದಾರ, ಹಾಗೂ ದೆಹಲಿಯ ಹಿರಿಯ ಕಲಾವಿದರಾದ ಶ್ರೀ ಭೀಮರಾವ್ ಮುರಗೋಡ, ಶ್ರೀಮತಿ ಶಾಲನ್ ಮುರಗೋಡ, ಶ್ರೀ ಶಿವಾನಂದ ಇಂಗಳೇಶ್ವರ್, ಶ್ರೀ ಸಖಾರಾಮ ಉಪ್ಪೂರು ಇನ್ನೂ ಹಲವಾರು ಸ್ಥಳೀಯ ಕಲಾವಿದರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕ್ರಮ ನಿರೂಪಿಸಿ, ಧನ್ಯವಾದ ಅರ್ಪಿಸಿದರು.

ರಾಜ್ಯೋತ್ಸದ ಅಂಗವಾಗಿ ಸಂಜೆ ನಡೆದ ಕಾರ್ಯಕ್ರಮದಲ್ಲಿ ತುಮಕೂರು ಮಂಜುನಾಥ್ ಮತ್ತು ತಂಡದವರು ಸುಗಮ ಸಂಗೀತ ಕಾರ್ಯಕ್ರಮವನ್ನು ನೀಡಿದರು. ಅ

***ಅಭಿಮತ ವರದಿ***



ಭಾವನೆಯ ಬಳ್ಳಿ

# ನೆನಪಿನ ಸುಳಿಯಲ್ಲಿ ನನ್ನಜ್ಜಿಯ ವೈದ್ಯಕೀಯ

ನನ್ನ ತಮ್ಮ ನನಗಿಂತ ಎರಡು ವರುಷ ಚಿಕ್ಕವನು. ಅವನು ಹೊಳೇನರಸೀಪುರದಲ್ಲಿ1941ರ ಎಪ್ರಿಲ್ 11ರಂದು ಹುಟ್ಟಿದ್ದು. ಯಥಾ ಪ್ರಕಾರ ನನ್ನ ತಾಯಿ ಅವನ ಬಸಿರಿನಲ್ಲಿ ನನ್ನನ್ನೂ ಕಟ್ಟಿಕೊಂಡು ಹೆರಿಗೆಗೆ ತೌರುಮನೆಗೆ ಹೋದರು.

ನಮ್ಮಜ್ಜಿ ಅಂದರೆ ತಾಯಿಯ ತಾಯಿ ಆಗಿನ ಕಾಲದ ನಾಲ್ಕನೇ ಕ್ಲಾಸ್‌ವರೆಗೆ ಓದಿದ್ದರೂ ಬಹಳ ಬುದ್ಧಿವಂತರು. ಅವರ ತಾಯಿ ಆ ಕಾಲದಲ್ಲಿ ಮೂರನೇ ಕ್ಲಾಸ್‌ವರೆಗೆ ಓದಿದ್ದರಿಂದ ಆಗಿನ ಮೈಸೂರು ಮಹಾರಾಜರು ನನ್ನ ಮುತ್ತಜ್ಜಿ ಸಾಯುವವರೆಗೂ ವರ್ಷಕ್ಕೆ ಒಂದು ಬಾರಿ ಅಕ್ಕಿ ತುಂಬಿದ ಮುಂಟೆ ಕಳುಹಿಸಿಕೊಡುತ್ತಿದ್ದರು. ನನ್ನ ಮುತ್ತಜ್ಜಿ ಮನೆಯವರು ಮತ್ತು ಮಹಾರಾಜರ ಹೆಂಡತಿ ಮಹಾರಾಣಿಯವರು ಒಳ್ಳೆಯ ಸ್ನೇಹಿತೆಯರಂತೆ!

ಈಗ ನನ್ನ ತಮ್ಮನ ಹುಟ್ಟಿನ ವಿಷಯ ಹೇಳೋಣ! ನಾನು ಎಂಟು ತಿಂಗಳಿಗೆ ಹುಟ್ಟಿದರೆ ಅವನು ಆರೂವರೆ ತಿಂಗಳಿಗೆ ಹುಟ್ಟಿಬಿಟ್ಟನಂತೆ. ನಾನು ಹುಟ್ಟಿದ ಆಸ್ಪತ್ರೆಯ ವೈದ್ಯೆ ಬಹಳ ಒಳ್ಳೆಯ ವೈದ್ಯಕೀಯ ತಜ್ಞೆ. ನನ್ನ ತಮ್ಮ ಎರಡೂವರೆ ತಿಂಗಳು ಮುಂಚೆಯೇ ಹುಟ್ಟಿದ್ದರಿಂದ ಬಹಳ ಎಚ್ಚರಿಕೆಯಿಂದ ಅವನನ್ನು ನೋಡಿಕೊಳ್ಳಬೇಕೆಂದು ವೈದ್ಯೆ ನನ್ನಜ್ಜಿಗೆ ಅನೇಕ ಉಪಾಯಗಳನ್ನು ಹೇಳಿಕೊಟ್ಟರು.

ನಮ್ಮ ತಾಯಿ ಮಾತ್ರ ತನಗೆ ಹೆಗ್ಗಣವೂ ಇಲಿಯೋ ಹುಟ್ಟಿರಬೇಕೆಂದು ಅವನನ್ನು ಮುಟ್ಟಲೂ ಹೆದರಿದ್ದರು. ಅವರಿಗೆ ಆಗ ಹದಿನಾಲ್ಕು ವರುಷ. ಏನು ಮಾಡಿದರೂ ಎದೆ ಹಾಲು ಕೊಡದೆ ಸದಾ ದುಃಖಿತರಾಗಿದ್ದರು. ಏನೇ ಆದರೂ ನಮ್ಮಜ್ಜಿ ತುಂಬಾ ಧೈರ್ಯವಂತೆ. ವಿವೇಕಿ.

ಆಗಿನ ಕಾಲದಲ್ಲಿ ಸಣ್ಣ ಸಣ್ಣ ಊರುಗಳಲ್ಲಿ ಶಾಖ-ನಿರ್ಧರಿತ ಇನ್‌ಕ್ಯೂಬೇಟರ್ ಇರಲಿಲ್ಲ. ಮುಂಚಿತವಾಗಿ ಜನಿಸಿದ ಮಗುವನ್ನು ತಾಯಿಯ ಗರ್ಭದ ಶಾಖದಂತೆ ಹೊರಗಿಟ್ಟಿರಲು ಬಹಳ ಕಷ್ಟವಾಗಿತ್ತಿತ್ತು. ಎಷ್ಟೋ ಮಕ್ಕಳು ಗರ್ಭಪಾತದಿಂದ ಸತ್ತು ಹೋಗುತ್ತಿದ್ದವು. ನಮ್ಮ ತಾಯಿಗೆ ಹೆರಿಗೆ ಮಾಡಿದ ಡಾಕ್ಟರ್ ನಮ್ಮಜ್ಜಿಗೆ ವಿವರವಾಗಿ ಮಗುವನ್ನು ಸಾಕುವ ಉಪಾಯವಾಗಿ ಹೇಳಿಕೊಟ್ಟರು.

ಅದೇನೆಂದರೆ ಸೌಧೆ ಒಲೆಯಿಂದ ಬಿಸಿಬಿಸಿ ಬೂದಿಯನ್ನು ಒಂದು ದೊಡ್ಡ ಕಬ್ಬಿಣದ ಬಾಣಲೆಯಲ್ಲಿಟ್ಟು ಅದರ ಮೇಲೆ ದೊಡ್ಡ ದೋಸೆ ಕಾವಲಿ ಇಟ್ಟು ಒಳ್ಳೆಯ ಹತ್ತಿಯನ್ನು ಸ್ಪಷ್ಟವಾಗಿ ಹರಡಿ ಮಗುವನ್ನು ಮಲಗಿಸಬೇಕು. ಉಷ್ಣಾಂಶ ಒಂದೇ ಸಮನಿರುವಂತೆ ಥರ್ಮೋಮೀಟರ್ ಹತ್ತಿಯ ಮಧ್ಯೆ ಇಟ್ಟು ಯಾವಾಗಲೂ ಪರೀಕ್ಷಿಸುತ್ತಿರಬೇಕು. ತಾಯಿಯ ಹಾಲನ್ನು ಬಳಲೆಯಲ್ಲಿ ತೆಗೆದುಕೊಂಡು ಹತ್ತಿ ಬತ್ತಿಯಿಂದ ಅದ್ದಿ ಬಾಯಿಗೆ ಹಿಂಡಬೇಕು ಅಥವಾ ಚೀಪಿಸಬೇಕು ಎಂದು ಹೇಳಿಕೊಟ್ಟು ತಾವು ದಿನಕ್ಕೆ ಎರಡು ಬಾರಿ ಮನೆಗೆ ಬಂದು ಮಗುವನ್ನು ಪರೀಕ್ಷಿಸುತ್ತಿದ್ದರು.

ದೈವಾನುಗ್ರಹದಿಂದಲೂ ನಮ್ಮಜ್ಜಿಯ ದೃಢ ಮನಸ್ಸಿನಿಂದಲು ಮಗು ದಿನೇ ದಿನೇ ಬೆಳೆಯುತ್ತಾ ಆರೋಗ್ಯವಾಗಿ ಆರು ತಿಂಗಳ ಹೊತ್ತಿಗೆ ಚೆನ್ನಾಗಿ ಆದ. ನಂತರ ನಮ್ಮ ತಾಯಿ ತನ್ನ ಎದೆ ಹಾಲು ತಾವೇ ಕುಡಿಸುತ್ತಿದ್ದರು.

ಆರು ತಿಂಗಳ ನಂತರ ನಮ್ಮ ತಾಯಿ ತನ್ನ ಅತ್ತೆ ಮನೆಗೆ ಹಿಂತಿರುಗುವಾಗ ನೀನು ಅಹಲ್ಯಾಳನ್ನು ಕರೆದುಕೊಂಡು ಹೋಗು. ನಾನು ನಿನ್ನ ಮಗನನ್ನು ಎರಡು ವರುಷ ಇಲ್ಲೇ ಇಟ್ಟುಕೊಂಡು ನಂತರ ಕಳಿಸಿಕೊಡುತ್ತೇನೆ ಎಂದು ಜವಾಬ್ದಾರಿ ತೆಗೆದುಕೊಂಡರು. ಅವನಿಗೆ ಜೀವವರ್ಧಕ ಆಹಾರ, ಬೀಟ್‌ರೂಟ್ ಹಲ್ವ, ಶಕ್ತಿವರ್ಧಕ ಲೇಹ ಇತ್ಯಾದಿ ಕೊಟ್ಟು ಚೆನ್ನಾಗಿ ಬೆಳೆಸಿ ಕಳುಹಿಸಕೊಟ್ಟರು.



ನನ್ನ ತಮ್ಮ ಅವನ ವಯಸ್ಸಿನಲ್ಲಿ ಆರು ಅಡಿ ಎತ್ತರವಿದ್ದು ಚೆನ್ನಾಗಿ ಈಜುವವನು. ಶಾರೀರಿಕ ಶ್ರಮದಿಂದ ಕೆಲಸಮಾಡಿ ಶಕ್ತಿವಂತನಾಗಿದ್ದ. ಬೆಂಗಳೂರಿನ ದಂಡಿನಲ್ಲಿ ಮಿಲಿಟರಿಗೆ ಸೇರಿ ನಂತರ ದೇಶದ ಅನೇಕ ಊರುಗಳಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದಾನೆ. ಅವನಿಗೆ ಈಗ 73 ವಯಸ್ಸು. ನಮ್ಮ ಮನೆಯಲ್ಲಿ ನಾವು ನಾಲ್ಕು ಜನ ಅಕ್ಕ ತಮ್ಮಂದಿರು ತಂಗಿಯಲ್ಲಿ ಅವನಂತೆ ಯಾರೂ ಇಲ್ಲ. ನಾನೂ ಐದು ಅಡಿ ಒಂದಿಂಚು ಇರುವುದರಿಂದ ತಮ್ಮನಾದರೂ ಅವನನ್ನು ಅಣ್ಣನೆಂದು ಕರೆಯುತ್ತೇನೆ.

ಹಿರಿಯರು ಬುದ್ಧಿವಂತರು ವಿವೇಕಿಗಳು. ವಿಚಕ್ಷಣೆಯಿಂದ ಕೆಲಸ ಮಾಡುತ್ತಿದ್ದರು. ಬಹಳ ಸಹನೆಯಿಂದಲೂ ಧೈರ್ಯದಿಂದಲೂ ಮನೋದಾರ್ಢ್ಯತೆಯಿಂದಲೂ ತಮ್ಮನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ನನ್ನ ಅಜ್ಜಿ ಒಬ್ಬ ವೈಜ್ಞಾನಿಕಳಾಗಿದ್ದರೆ ಇನ್ನೇನು ಮಾಡುತ್ತಿದ್ದರೋ ಏನೋ ಎಂದು ನನಗೆ ಆಶ್ಚರ್ಯ ಮತ್ತು ವಿಸ್ಮಯವಾಗುತ್ತಿದೆ.

ನಮ್ಮ ಮಕ್ಕಳು (ಅವರ ಮರಿಮಕ್ಕಳು) ಸಹ ಅವರ ಕೈಯಲ್ಲೇ ಮೂರು ಮೂರು ತಿಂಗಳು ಬೆಳೆದರು. ಮನೆಯಲ್ಲಿ ಅವರ ಮೊಮ್ಮಕ್ಕಳಿಗೆ ಮಕ್ಕಳು ಹುಟ್ಟುತ್ತಾರೆಂದು ತಿಳಿದ ಕೂಡಲೇ, ಬಿಳೀ ಮಲ್‌ಮಲ್ ಬಟ್ಟೆಯನ್ನು ಶುದ್ಧವಾಗಿ ಒಗೆದು, ಅದರಲ್ಲಿ ಮೆತ್ತನೆಯ ಪ್ಯಾಮ್‌ಪರ್ಸ್ ಡಜನ್‌ಗಟ್ಟಲೆ ಹೊಲಿದು, ದಟ್ಟಗಳನ್ನು ಹೊಲಿದು ತಯಾರಿಸುತ್ತಿದ್ದರು. ಅಂತಹ ಅಜ್ಜಿಯ ಮೊಮ್ಮಗಳು ನಾನು!

ಕೆಲಸ, ಕುಟುಂಬ, ಆತ್ಮಸಮ್ಮಾನ, ಆತ್ಮವಿಶ್ವಾಸ, ಸಹಕಾರ ಎಲ್ಲವನ್ನೂ ಸಮನ್ವಯವಾಗಿ ಕಂಡುಕೊಂಡರೆ ಬಾಳು ಚೆಂದ ! ಅ

***ಡಾ. ಅಹಲ್ಯಾಚಿಂತಾಮಣಿ***

## ರಾಜ್ಯೋತ್ಸವ

ಬಂದಿತು ನಮ್ಮೆಲ್ಲರ ರಾಜ್ಯೋತ್ಸವ, ನವ್ಹೆಂಬರ್ ಒಂದು,
ನಮ್ಮ ನವ ಕರ್ನಾಟಕ ಉದಯಿಸಿತು ಇಂದು

ರಾಷ್ಟ್ರ ರಾಜಧಾನಿ ಕನ್ನಡಿಗರೇ ಸೇರಿರಿ ಓಡಿ ಬಂದು,
ಆರ್.ಕೆ.ಪುರಂನ ದೆಹಲಿ ಕರ್ನಾಟಕ ಸಂಘದಲ್ಲಿಂದು

ಹಾಡುತ್ತ-ಕುಣಿಯುತ್ತ ಸಾಗೋಣ ನಾವೆಲ್ಲ ಒಂದು,
ಕನ್ನಡ ತಾಯಿಗೆ ನಮಿಸಿ, ಅರ್ಪಿಸೋಣ ಹೂ ತಂದು

ಸಿಹಿ-ತಿಂಡಿಗಳನ್ನು ಹಂಚೋಣ ಎಲ್ಲರಿಗೊಂದೊಂದು,
ಆಚರಿಸೋಣ ನಮ್ಮ ರಾಜ್ಯೋತ್ಸವ ಹಬ್ಬವಿಂದು

ಒಟ್ಟಗೂಡಿ ಹೇಳೋಣ "ಜೈ ಕರ್ನಾಟಕ ಮಾತೆ" ಎಂದು

*ಭಂಡಾರಕರ್. ಎಸ್. ಎಲ್*



## ತಾಯ್ನುಡಿ

ಕನ್ನಡ ನಾಡು ಕನ್ನಡ ನುಡಿ
ದುಡಿ ಇದಕಾಗಿ ಹಗಲಿರುಳು
ಎಲ್ಲಿದ್ದರೂ ಹೇಗಿದ್ದರು ತಾಯ್ನುಡಿ
ನಮ್ಮ ಉಸಿರಾಗಲಿ ಬದುಕಾಗಲಿ

ನಮ್ಮ ಭಾಷೆ ನುಡಿವ ಮುತ್ತಾಗಲಿ
ಅಳವಡಿಸು ದಿನದಿನವು ಇದ
ಆಡು ಮಾತಾಗಿ ಅನುಸರಿಸು
ಬದುಕಿನ ಉದ್ದಗಲಗಳಲಿ

ಗುಂಪು ಗುಂಪಿನಲಿ ಹರಡಲಿ
ಕನ್ನಡದ ಸವಿಗಂಪು ಇಂಪಾಗಲಿ
ಎಲ್ಲರೂ ಜೊತೆಗೂಡಿ ಹಾಡಲಿ
ಕುಣಿದಾಡಲಿ ಮನಮನೆಗಳಲಿ

ಸೂಸಲಿ ಕನ್ನಡದ ಕಂಪನು
ಸವಿಯಲಿ ಸಿಹಿಯನು ಭಾಷೆ
ಬೆಳೆಯಲಿ ಭಾಂದವ್ಯವನು ಕಲೆ
ಸಾಹಿತ್ಯ-ಸಂಸ್ಕೃತಿ ಸಿರಿಯನು

ಘಮ ಘಮಿಸಲಿ ಕನ್ನಡದ ಪರಿಮಳ
ಜಗವೆಲ್ಲ ತಾಯ್ನುಡಿಯ ಮೆಲುಮಾತು
ಗುಣುಗುಣಿಸಲಿ ಎಲ್ಲೆಡೆಯು ಪಸರಿಸಲಿ
ಕನ್ನಡದ ಸುಗಂಧ "ಸಿರಿಗನ್ನಡಂ ಗೆಲ್ಗೆ"

*ಸಖಾರಾಮ ಉಪ್ಪೂರು*

## ಹಣ

ಝಣ, ಝಣ ಪ್ರತಿಧ್ವನಿಸುತ್ತದೆ ಈ ಹಣ,
ಥಕ, ಥೈ ಥಕ ಥೈ ಕುಣಿತ್ತೈತೆ ಇದಕ್ಕೆ ಜನ,

ಇದು ಮರಳು ಮಾಡಿದೆ ಜಗದೆಲ್ಲೆಡೆ ಜನರ ಮನ,
ತಂದೆ-ತಾಯಿ, ಅಣ್ಣ-ತಮ್ಮಂದಿರಲ್ಲಿ ಮಾಡಿದೆ ಇಬ್ಬಣ,

ಜನ ತಿಳಿದರು ಇದು ಇದ್ದೆಡೆ ಸಂತೋಷದ ತಾಣ,
ಆದರೆ ಇವರಿಗೆ ಗೊತ್ತಿಲ್ಲ ಇದರಿಂದ ಹೋಗತ್ತೆ ಪ್ರಾಣ,

ಹೆಣ್ಣು-ಹೊನ್ನು-ಮಣ್ಣು ಸಿಗುವುದು ಕೊಟ್ಟರೇ ಹಣ,
ತಾಯಿ ಮಾತ್ರ ಸಿಗಳು ನೀನೆಷ್ಟೇ ಕೊಟ್ಟರೂ ಕಾಂಚಾಣ,

ಇದನು ಗಳಿಸೋಕೆ ಬಂದ್ರಿ ದಾಟಿ ಸಾವಿರ ಮೈಲಿಯನ್ನ,
ಕಳೆದುಕೊಂಡ್ರಿ ಬಂಧು-ಬಳಗದ ಬಾಂಧವ್ಯವನ್ನ,

ದಯವಿಟ್ಟು ಮರಿಬೇಡಿ ಕನ್ನಡ ಸಂಸ್ಕೃತಿಯನ್ನ,
ನಮ್ಮ ಸಂಸ್ಕೃತಿಯೊಂದಿದ್ದರೆ ಸಾಕು ಗಳಿಸಿದಂತೆ ಕೋಟಿ ಹಣವನ್ನ.

*ಭಂಡಾರಕರ್. ಎಸ್. ಎಲ್*

## ರಾಜ್ಯೋತ್ಸವ ದಿನದ ಕರ್ತವ್ಯ!

ಕನ್ನಡವ ಉಳಿಸಿ ಬೆಳೆಸುವ ಹೊಣೆ
ನಮ್ಮೆಲ್ಲರದು ಕನ್ನಡ ನಾಡು-ನುಡಿಗಾಗಿ
ದುಡಿಯಲೇ ಬೇಕಾಗಿ ಹಗಲಿರುಳು
ಎಲ್ಲಿದ್ದರು ಹೇಗಿದ್ದರು ಉಸಿರಾಗಲಿ ತಾಯ್ನುಡಿ

ಅಡಿಗೆ ಮನೆಯಲ್ಲಿ, ಸ್ನೇಹಿತರೊಡನೆ ಜಗಳಾಡು
ವಾಗ ಸರಸದ ವೇಳೆ ಫೋನಿನಲಿ
ಮೊಬೈಲಿನಲಿ ಮೆಟ್ರೋದಲಿ ಎಲ್ಲೆಂದರಲ್ಲಿ
ಅಳವಡಿಸು ದಿನದಿನವು ಆಡು ಮಾತಾಗಿ ಕನ್ನಡ

ಗುಂಪುಗುಂಪಿನಲ್ಲಿ ಕನ್ನಡದಲಿ ಕತೆ ಹೇಳಿ
ಹರಟೆ ಹೊಡೆದು ಹಾಡಿ ಕುಣಿದು ನಾಟಕ ಸಿನೆಮಾ
ನೋಡಿ ಮಜವನುಂಡು ಭಾಷಣ, ಚರ್ಚೆ
ಮಾಡಿ ಬರೆದು ಓದಿ ಗೋಡೆಗಂಟಿಸಿ ಆನಂದಿಸು

ಉಳಿದೀತು, ಬೆಳೆದೀತು ಕನ್ನಡ ಭಾಷೆ
ಉಳಿದೇವು ನಾವು ಕನ್ನಡಿಗರು ಕನ್ನಡ ನಾಡು
ಇದೇ ಕನ್ನಡ ರಾಜ್ಯೋತ್ಸವದ ಈ ದಿನದಂದು
ಮಾಡಬಹುದಾದ ಮಾಡಲೇಬೇಕಾದ ಕರ್ತವ್ಯ.

*ಸಖಾರಾಮ ಉಪ್ಪೂರು*

# ಕೆಂಪು ಹಳದಿ

ನಿಸರ್ಗದ ಹಸಿರು, ಕಡಲು ಮತ್ತು ಆಗಸದ ತಿಳಿನೀಲಿ, ಸೂರ್ಯೋದಯದ ಕೇಸರಿಗಳು ದಿನಚರಿಯ ಖಾಲಿ ಪುಟಗಳಿಗೆ ಬಣ್ಣಗಳನ್ನು ಬಳಿಯುತ್ತವೆ. ಬಣ್ಣಗಳು ಬದುಕನ್ನು ಕಟ್ಟುತ್ತವೆ. ನಿಸರ್ಗದ ಬಣ್ಣಗಳನ್ನು ನಮ್ಮ ಇಂದ್ರಿಯಗಳಿಂದ ಆಸ್ವಾದಿಸಿ ನಮ್ಮದೇ ಬಣ್ಣದ ಲೋಕವನ್ನು ಕಟ್ಟುತ್ತೇವೆ. ಕಟ್ಟಿದ ಬಣ್ಣಗಳಿಗೆ ಭಾವನೆಗಳ ಲಹರಿಯ ಅರ್ಥಗಳನ್ನು ಅಂಟಿಸುತ್ತೇವೆ.

ಒಂದೊಂದು ಬಣ್ಣ ಒಬ್ಬೊಬ್ಬರಿಗೆ ಒಂದೊಂದು ಧ್ವನಿಗಳನ್ನು ಕೇಳಿಸಿದರೆ, ಕೆಲವೊಂದು ಬಣ್ಣಗಳು ಎಲ್ಲರೊಳಗೂ ಒಂದೇ ತರದ ಅನುಭಾವವನ್ನು ತಂದು ಕೊಡುತ್ತವೆ. ಶರದೃತುವಿನ ತಂಪು ಆಗಸದ ತಿಳಿನೀಲಿಯ ಎತ್ತರದಾಚೆ ಹಾರಾಡುವ ಕೆಂಪು ಹಳದಿ ಕನ್ನಡ ಬಾವುಟ ಕರ್ನಾಟಕ ಎಂಬ ಭಾವಲಹರಿಯನ್ನು ನಮ್ಮೊಳಗೆ ತೇಲಿಸಿದಾಗ ಭಾವುಕತೆಯಿಂದ ನಾವು ನಮ್ಮ ಮಣ್ಣು ಮತ್ತು ಮಾತಿನ ಗರಿಮೆಯನ್ನು ಕೊಂಡಾಡುತ್ತೇವೆ.

ನವಂಬರ್ ತಿಂಗಳಲ್ಲಿ ನಾವು ಉಲ್ಲಾಸ ಮತ್ತು ಉತ್ಸುಕತೆಯಿಂದ ಸಂಭ್ರಮಿಸುವ ಕರ್ನಾಟಕ ರಾಜ್ಯೋತ್ಸವದ ಪ್ರತಿ ಘಳಿಗೆಗಳು ನಮ್ಮನ್ನು ಕರ್ನಾಟಕವೆಂಬ ಒಂದೇ ಮಣ್ಣಿನ ಮಕ್ಕಳು ಎಂದು ನೆನಪಿಸುತ್ತವೆ. ಈ ಸಂಭ್ರಮವು ನಾಡಿನಾಚೆ ದೂರದೂರಿನಲ್ಲಿರುವ ನಮಗೆ ನಾಡಿನ ಕುರಿತು ಮತ್ತೆ ಮತ್ತೆ ನೆನಪುಗಳನ್ನು ಬಗೆಯುವ ಸಂದರ್ಭವಾಗುತ್ತದೆ.

ನಾಡಿನ ಸಂಸ್ಕೃತಿ ಮತ್ತು ನುಡಿಯ ಪ್ರತಿಬಿಂಬಗಳನ್ನು ತೋರಿಸುವ ಮತ್ತು ಎಲ್ಲಾ ಅಭಿರುಚಿಯ ಮನಸ್ಸುಗಳಿಗೆ ಮುದನೀಡುವ ಹಲವು ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಈಗಾಗಲೇ ಆರಂಭಗೊಂಡಿವೆ. ನಮ್ಮ ನಾಡಿನ ಅಪ್ಪಟ ಪ್ರತಿಭೆಗಳನ್ನು ರಾಷ್ಟ್ರ ರಾಜಧಾನಿಯಲ್ಲಿ ಪ್ರದರ್ಶಿಸಿದಾಗ ಮತ್ತು ಅದನ್ನು ನಾವಲ್ಲದೇ ಇಲ್ಲಿನ ಸ್ಥಳೀಯರು ನೋಡಿ ನಮ್ಮ ನಾಡಿನ ಕುರಿತು ಗೌರವ ವ್ಯಕ್ತ ಪಡಿಸುವಾಗ ನಮ್ಮ ಎದೆಯೊಳಗೂ ನಾವು ಕನ್ನಡಿಗರೆಂಬ ಹೆಮ್ಮೆ ಉಮ್ಮಳಿಸುತ್ತದೆ. ಈ ಸಲ ನಮ್ಮ ನಾಡಿನ ಮಕ್ಕಳ ನಾಟಕಗಳು ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶನಗೊಂಡವು. ದೆಹಲಿಯ ಅಂತರಾಷ್ಟ್ರೀಯ ಕಲಾ ಉತ್ಸವದ ಅಂಗವಾಗಿ ಯಕ್ಷಗಾನವೂ ಪ್ರದರ್ಶನಗೊಂಡಿತು. ರಂಗಭೂಮಿಯ ಮತ್ತು ಯಕ್ಷಗಾನದ ಪ್ರದರ್ಶನಗಳು ಸದಸ್ಯರ ಅನುಕೂಲಕ್ಕಾಗಿ ಸಂಘದಲ್ಲಿ ಕೂಡಾ ಪ್ರದರ್ಶನಗೊಳ್ಳುವ ವ್ಯವಸ್ಥೆಯಾಗಿದೆ. ಜತೆಗೆ ಕನ್ನಡ ಚಲನಚಿತ್ರಗಳೂ ಸಂಘದ ಸಭಾಂಗಣದಲ್ಲಿ ನಡೆಯುತ್ತಿದ್ದು, ನವಂಬರ್ ನಿಜವಾಗಿಯೂ ಕರ್ನಾಟಕದ ನಮಗೆಲ್ಲಾ ಉತ್ಸವದ ತಿಂಗಳಾಗಿದೆ.

ನಿಮಗೆಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹಾರ್ಯೆಕೆಗಳು. ಅ

*ಬಾಲಕೃಷ್ಣ ನಾಯ್ಕ್ ಡಿ.*

# ಎ ಸೂರ್ಯಪ್ರಕಾಶ್ ಪ್ರಸಾರ ಭಾರತಿಯ ನೂತನ ಅಧ್ಯಕ್ಷರು



ಹಿರಿಯ ಪತ್ರಕರ್ತ, ಕನ್ನಡಿಗ ಅರಕಲಗೂಡು ಸೂರ್ಯಪ್ರಕಾಶ್ ಅವರು ಪ್ರಸಾರಭಾರತಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ದಿ ಪಯೊನೀರ್ ಇಂಗೀಷ್ ಪತ್ರಿಕೆಯ ಸಲಹಾ ಸಂಪಾದಕರಾಗಿರುವ ಸೂರ್ಯಪ್ರಕಾಶ್ ಅವರು ದೆಹಲಿಯ ವಿವೇಕಾನಂದ ಇಂಟರ್‌ನ್ಯಾಷನಲ್ ಫೌಂಡೇಷನ್‌ನ ಗೌರವಾನ್ವಿತ ಸದಸ್ಯರೂ ಆಗಿದ್ದಾರೆ. ಹಿರಿಯ ಪತ್ರಕರ್ತೆ ಮೃಣಾಲ್ ಪಾಂಡೆ ಅವರಿಂದ ಆರು ತಿಂಗಳ ಹಿಂದೆ ತೆರವಾದ ಸ್ಥಾನವನ್ನು ತುಂಬಿರುವ ಸೂರ್ಯಪ್ರಕಾಶ್ ಅವರು ಇತ್ತೀಚೆಗಷ್ಟೇ ನಿಧನರಾದ ಹಿರಿಯ ಪತ್ರಕರ್ತ ಎಂ.ವಿ. ಕಾಮತ್ ಅವರ ನಂತರ ಪ್ರಸಾರ ಭಾರತಿಯ ಅಧ್ಯಕ್ಷ ಸ್ಥಾನ ವಹಿಸಿಕೊಂಡಿರುವ ಎರಡನೇ ಕನ್ನಡಿಗರಾಗಿದ್ದಾರೆ. ಹಾಸನದ ಅರಕಲಗೂಡಿನವರಾದ ಇವರು ಮೈಸೂರು ವಿಶ್ವವಿದ್ಯಾಲಯದಿಂದ ಸಮಾಜ ಶಾಸ್ತ್ರದಲ್ಲಿ ಎಂ.ಎ. ಪದವಿ, ತುಮಕೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಪ್ರಸಾರ ಭಾರತಿಯು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ವ್ಯಾಪ್ತಿಯಲ್ಲಿನ ದೂರದರ್ಶನ ಮತ್ತು ಆಲ್ ಇಂಡಿಯಾ ರೇಡಿಯೊಗಳ ನಿರ್ವಹಣೆಯ ಹೊಣೆಗಾರಿಕೆಯನ್ನು ಹೊಂದಿದೆ.

ಮಾಧ್ಯಮರಂಗದಲ್ಲಿ ಸುಮಾರು ನಾಲ್ಕು ದಶಕಗಳ ಅನುಭವ ಹೊಂದಿರುವ ಸೂರ್ಯಪ್ರಕಾಶ್ ಅವರು ಝೀ ನ್ಯೂಸ್‌ನಲ್ಲಿ ಸಂಪಾದಕ, ದಿ ಪಯೋನಿರ್‌ನಲ್ಲಿ ಕಾರ್ಯನಿರ್ವಾಹಕ ಸಂಪಾದಕ, ಬ್ಯಾಂಕಾಕ್ ಮತ್ತು ಸಿಂಗಾಪುರದಲ್ಲಿ ಪ್ರಕಟವಾಗುವ ದ ಏಷ್ಯಾ ಟೈಮ್ಸ್ ದೈನಿಕದಲ್ಲಿ ಇಂಡಿಯಾ ಎಡಿಟರ್, ಈ ನಾಡು ನ್ಯೂಸ್‌ಪೇಪರ್ ಸಮೂಹದ ರಾಜಕೀಯ ಸಂಪಾದಕ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ದೆಹಲಿ ಬ್ಯುರೋ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿಯ ಫಿಲ್ಮ್ ಆಂಡ್ ಮೀಡಿಯಾ ಸ್ಕೂಲ್ ಮತ್ತು ಪಯೋನೀರ್ ಮೀಡಿಯಾ ಸ್ಕೂಲ್‌ಗಳ ಸಂಸ್ಥಾಪಕ ನಿರ್ದೇಶಕರಾಗಿದ್ದಾರೆ.

ಇವರು ದಿ ಪಯೋನಿಯರ್, ಈನಾಡು, ದ ಇಂಡಿಯನ್ ರಿಪಬ್ಲಿಕ್, ಸಂಯುಕ್ತ ಕರ್ನಾಟಕ ಮತ್ತು ಹಿಂದಿ ಪತ್ರಿಕೆ ದೈನಿಕ್ ಜಾಗರಣ್‌ದಲ್ಲಿ ಪ್ರಕಟವಾಗುವ ಅಂಕಣಗಳಲ್ಲೆ ಗಂಭೀರ ರಾಜಕೀಯ ವಿಶ್ಲೇಷಣೆಯನ್ನು ಮಾಡುತ್ತಾರೆ. ರಾಷ್ಟ್ರ ರಾಜಕಾರಣದ ಕುರಿತು ಅನೇಕ ಸಂಶೋಧನಾ ಪ್ರಬಂಧಗಳನ್ನು ಅವರು ಪ್ರಕಟಿಸಿದ್ದಾರೆ. ಹಲವಾರು ಪುಸ್ತಕಗಳನ್ನು ಬರೆದಿರುವ ಸೂರ್ಯಪ್ರಕಾಶ್ ಅವರ ಪಬ್ಲಿಕ್ ಮನಿ ಪ್ರೈವೇಟ್ ಅಜೆಂಡಾ ಎಂಬ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯ ಸದ್ಬಳಕೆ ಮತ್ತು ದುರ್ಬಳಕೆ ಕುರಿತು ಬರೆದ ಕೃತಿಯು ಬಹಳಷ್ಟು ಚರ್ಚಿತವಾಗಿದೆ.

ಭಾರತದ ಪಾರ್ಲಿಮೆಂಟಿನ ಬಗ್ಗೆ ಸಂಶೋಧನಕಾರಿ ಪ್ರಬಂಧ ಮತ್ತು ಪುಸ್ತಕಗಳನ್ನು ಬರೆದಿರುವ ಸೂರ್ಯಪ್ರಕಾಶ್ ಅವರು ಜರ್ಮನ್ ಮತ್ತು ಬ್ರಿಟಿಷ್ ಪಾರ್ಲಿಮೆಂಟ್‌ಗಳ ಬಗ್ಗೆಯೂ ಅಧ್ಯಯನ ನಡೆಸಿದ್ದಾರೆ. ಹಲವಾರು ಉನ್ನತ ಫೆಲೋಶಿಪ್‌ಗಳನ್ನು ಪಡೆದಿರುವ ಸೂರ್ಯಪ್ರಕಾಶ್ ಅವರಿಗೆ ಬಿಪಿನ್ ಚಂದ್ರಪಾಲ್ ಸನ್ಮಾನ್ ಅಲ್ಲದೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿದೆ. ಅ

*ಅಭಿಮತ ವರದಿ*

# ವಚನ ಸಾಹಿತ್ಯದ ಹಿಂದಿ ಅನುವಾದಿತ ಕೃತಿ ಡೆಹ್ರಾಡೂನಿನಲ್ಲಿ ಬಿಡುಗಡೆ

ಬಸವ ಸಮಿತಿ, ಬೆಂಗಳೂರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ನೈನಿತಾಲ್ ಹಿಂದಿ-ಕನ್ನಡ ಸಾಹಿತ್ಯ ಸಂಸ್ಕೃತಿ ವಿನಿಮಯ ಮಂಚ, ಹಲ್ದ್ವಾನಿ, ಉತ್ತರಾಖಂಡ್, ದೊಡ್ಡ ಬೆಲೆ ಪುಟ್ಟಣ್ಣ ಚನ್ನ ಸೋಮಣ್ಣ ವಚನ ವಾಚನಾಲಯ, ತುಮಕೂರು, ಇವುಗಳ ಸಂಯುಕ್ತಾಶ್ರಯದಲ್ಲಿ ಉತ್ತರ ಭಾರತದ ಉತ್ತರಾಖಂಡ್ ಡೆಹ್ರಾಡೂನಿನಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದು ಅಕ್ಟೋಬರ್ 26ರಂದು ನಡೆಯಿತು.

ವಚನ ಸಾಹಿತ್ಯದ ಹಿಂದಿ ಅನುವಾದಿತ ಕೃತಿ ಮತ್ತು ಲೇಖಕಿ ಕಲಾಮಂಜುನಾಥ ಅವರು ಕನ್ನಡದಲ್ಲಿ ರಚಿಸಿರುವ "ತೆಂಕಣವೇನ ಬಡಗಣವೇನ" ಕವನ ಸಂಕಲನಗಳ ಲೋಕಾರ್ಪಣೆಯನ್ನು ಲೇಖಕ ಪದ್ಮಶ್ರೀ ಡಾ. ಲೀಲಾಧರ ಜಗೂರಿ ಮತ್ತು ಭಾಷಾ ತಜ್ಞ ಮತ್ತು ಸಂಸ್ಕೃತ ಬೋಧಕ ಡಾ. ರಾಮವಿನಯ ಸಿಂಹ ಅವರು ಮಾಡಿದರು. ಇದೇ ಸಂದರ್ಭದಲ್ಲಿ ಮುರುಘಾಮಠದ ಶಾಖಾ ಮಠದ ಶ್ರೀ ಬಸವ ಪ್ರಣವರಮಾನಂದ ಸ್ವಾಮೀಜಿಯವರು ಆಶೀರ್ವಚನ ನೀಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಹುಭಾಷಾ ತಜ್ಞೆ ಡಾ. ರಂಜನಾ ರಾಜನ್ ದಂಪತಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು ವಹಿಸಿದ್ದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ವಿ.ವಿ. ಬಿರಾದಾರ್ ಮತ್ತು ಶ್ರೀ ಆನಂದ ಮುರಗೋಡು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಅ

*ಅಭಿಮತ ವರದಿ*




**SAUJANYA** PRINTING PRESS

A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್

ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Nov - 2014, Vol. No.25, Issue No.2, Price Rs.1/- RNI Regn. No. 53405/91, DL-SW-1/4016/13-15
Printout Date : Oct 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

